ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



19ನೇ ಐಪಿಎಲ್ ಆವೃತ್ತಿಗೂ ಮುನ್ನ ಗುಜರಾತ್ ಟೈಟನ್ಸ್ ತಂಡವು ಆಸ್ಟ್ರೇಲಿಯಾ ತಂಡದ ಮಾಜಿ ಕ್ರಿಕೆಟಿಗ ಮ್ಯಾಥ್ಯೂ ಹೇಡನ್ ಅವರನ್ನು ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಿದೆ.

11 ಮಾರ್ಚ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 1 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸೋತಾಗ ಗಂಭೀರನಾಗಿ... ಗೆದ್ದಾಗ ಗೌತಮನಾಗಿ...! » 2



ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸುಪ್ರೀಂ ಅಸ್ತು » 3



ಮಹಿಳೆಯರು ಜಾಗೃತರಾದಲ್ಲಿ ಸ್ವಾವಲಂಬನೆ ಜೀವನ ಸಾಧ್ಯ » 4

## ಒಳ ಮೀಸಲಾತಿ : ಮಾ.27ಕ್ಕೆ ವಿಶೇಷ ಸಂಪುಟ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಹಂಚಿಕೆ ಮಾಡಿದ ನಂತರವೇ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕೆಂದು ದಲಿತ ಎಡಗೈ ಸಮುದಾಯದ ನಾಯಕರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಸಚಿವರಾದ ಕೆ.ಹೆಚ್. ಮುನಿಯಪ್ಪ ಮತ್ತು ಆರ್.ಬಿ. ತಿಮ್ಮಾಪುರ ನೇತೃತ್ವದ ಎಡಗೈ ಸಮುದಾಯದ ನಾಯಕರು ಈ ಕುರಿತು ಮನವಿ ಸಲ್ಲಿಸಿದ್ದಾರೆ.

ಒಳ ಮೀಸಲಾತಿ ಕುರಿತು ಚರ್ಚಿಸಲು ಮಾ. 27ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ. ಮುಖ್ಯಮಂತ್ರಿಯನ್ನು ಭೇಟಿಯಾದ ಬಳಿಕ ಮಾತನಾಡಿದ ಮುನಿಯಪ್ಪ ಅವರು, ನಮ್ಮ ಮನವಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ವಿಚಾರವಾಗಿ ಅನಗತ್ಯ ಹೇಳಿಕೆಗಳನ್ನು ಯಾರೂ ನೀಡಬಾರದು, ಸಂಘಟನೆಗಳು ಹೋರಾಟಗಳನ್ನೂ ಹಮ್ಮಿಕೊಳ್ಳಬಾರದೆಂದು ಮನವಿ ಮಾಡಿದರು.

# ಎಲ್‌ಪಿಜಿ ಬಿಕ್ಕಟ್ಟು: ಪ್ರಧಾನಿ ಉನ್ನತ ಮಟ್ಟದ ಚರ್ಚೆ

### ಕೊರತೆ ನೀಗಿಸಲು ಅಗತ್ಯ ಸರಕುಗಳ ಕಾಯ್ದೆ ಬಳಸಿದ ಕೇಂದ್ರ । ತೈಲ ಸಂಸ್ಕರಣೆಯಲ್ಲಿ ಶೇ.10 ರಷ್ಟು ಉತ್ಪಾದನೆ ಹೆಚ್ಚಳ

• ಪ್ರಜೋದಯ ವರದಿ

**ನವದೆಹಲಿ:** ಇರಾನ್, ಇಸ್ರೇಲ್ ಮತ್ತು ಅಮೇರಿಕಾ ನಡುವಿನ ಹೆಚ್ಚುತ್ತಿರುವ ಸಂಘರ್ಷದಿಂದ ಉಂಟಾದ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಕೊರತೆಯನ್ನು ನೀಗಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ತುರ್ತು ಸಭೆ ಕರೆದು, ಉನ್ನತ ಮಟ್ಟದ ಚರ್ಚೆ ನಡೆಸಿದರು.

ದೇಶೀಯ ಇಂಧನ ಮಾರುಕಟ್ಟೆಯನ್ನು ರಕ್ಷಿಸಲು ಸರ್ಕಾರ ಅಗತ್ಯ ಸರಕುಗಳ ಕಾಯ್ದೆಯನ್ನು ಸಕ್ರಿಯಗೊಳಿಸಿದೆ. ಎಲ್‌ಪಿಜಿ ಉತ್ಪಾದನೆ ಹೆಚ್ಚಿಸಲು ಹಾಗು ಹೈಡ್ರೋಕಾರ್ಬನ್‌ಗಳನ್ನು ಎಲ್‌ಪಿಜಿ ಸಂಗ್ರಹಕ್ಕೆ ಸೇರಿಸುವಂತೆ ದೇಶದಲ್ಲಿರುವ ರಿಫೈನರಿಗಳು ಹಾಗೂ ಪೆಟ್ರೋಕೆಮಿಕಲ್ ಘಟಕಗಳಿಗೆ ಸರ್ಕಾರ ಆದೇಶ ಹೊರಡಿಸಿದೆ.

ಎಲ್‌ಪಿಜಿ ಸರಬರಾಜು ಕುಂಠಿತವಾಗದಂತೆ ಎಚ್ಚರ ವಹಿಸಲು ನೈಸರ್ಗಿಕ ಅನಿಲವನ್ನು ಸಮರ್ಪಕವಾಗಿ ಬಳಸುವಂತಹ ವ್ಯವಸ್ಥೆಯನ್ನು ಎಸೆನ್ಷಿಯಲ್ ಕಮಾಡಿ ಟೀಸ್ ಆ್ಯಕ್ಟ್ ಮೂಲಕ ಮಾಡಲಾಗುತ್ತಿದೆ. ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಗೃಹಬಳಕೆಯ ಪಿಎನ್‌ಜಿ (ಕೊಳವೆ ಅನಿಲ) ಮತ್ತು ವಾಹನ ಬಳಕೆಯ ಸಿಎನ್‌ಜಿ ಅನಿಲಗಳ ಸರಬರಾಜು ನೂರಕ್ಕೆ ನೂರು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಇತರೆ ಸರಕುಗಳಾದರೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಆಧಾರದ ಮೇಲೆ ಸರಬರಾಜು ಮಿತಿ ಹಾಕಲಾಗುತ್ತದೆ.





ಜಾಗತಿಕ ರಾಜಕೀಯ ಪ್ರಕ್ಷುಬ್ಧತೆಯಿಂದಾಗಿ ತೈಲ ಮತ್ತು ಪೂರೈಕೆಯಲ್ಲಿ ವ್ಯತ್ಯಯ ಆಗಿರುವ ಹಿನ್ನಲೆಯಲ್ಲಿ ದೇಶೀಯ ಗ್ರಾಹಕರಿಗೆ ಎಲ್‌ಪಿಜಿ ಲಭ್ಯತೆಯನ್ನು ಖಚಿತಪಡಿಸಲು ಉತ್ಪಾದನೆ ಹೆಚ್ಚಳಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ ಎಂದು ತೈಲ ಮಾರುಕಟ್ಟೆ ಕಂಪನಿಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಜಗತ್ತಿನ ಅರ್ಧಕ್ಕಿಂತ ಹೆಚ್ಚು ತೈಲ ಪೂರೈಕೆ ಮಾಡುವ ಪಶ್ಚಿಮ ಏಷ್ಯಾ ಭಾಗದಲ್ಲಿ ಭೀಕರ ಯುದ್ಧ ನಡೆಯುತ್ತಿದೆ. ಇದರಿಂದ ತೈಲ ಉತ್ಪಾದನೆ ನಿಂತು ಹೋಗಿರುವುದು ಮಾತ್ರವಲ್ಲ, ತೈಲ ಸಾಗಣೆಯೂ ಸ್ಥಗಿತಗೊಂಡಿದೆ. ಗಲ್ಫ್ ಪ್ರದೇಶದಿಂದ ತೈಲ ಸಾಗಣೆಯ ಹಾದಿಯಲ್ಲಿರುವ ಹಾರ್ಮುಜ್ ಜಲಸಂಧಿ ಸದ್ಯ ಬಹುತೇಕ ತಡೆ ಹೊಂದಿದೆ. ಇದರಿಂದಾಗಿ ಗಲ್ಫ್‌ನಿಂದ ಯಾವ ತೈಲವೂ ಹೊರಬರಲು ಆಗುತ್ತಿಲ್ಲ. ಭಾರತದಲ್ಲಿ ಕಚ್ಚಾ ತೈಲದ ಸಂಗ್ರಹ ಉತ್ತಮ ಪ್ರಮಾಣದಲ್ಲಿದೆಯಾರೂ, ಎಲ್‌ಪಿಜಿ, ಎಲ್‌ಎನ್‌ಜಿ ಇತ್ಯಾದಿ ಅನಿಲಗಳ ಕೊರತೆ ಎದುರಾಗಿದೆ.

> **ಹೋಟೆಲ್ ಮುಚ್ಚುವ ಸ್ಥಿತಿ**
>
> ಅನಿಲ ಸರಬರಾಜಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ದೇಶದ ಪ್ರಮುಖ ನಗರಗಳಲ್ಲಿನ ಹೋಟೆಲ್, ರೆಸ್ಟೋರೆಂಟ್‌ಗಳು ಒತ್ತಡದಲ್ಲಿ ಕಾರ್ಯ ನಿರ್ವಹಿಸುವಂತಾಗಿದೆ. ಮಂಗಳವಾರ ಬೆಂಗಳೂರು ಸೇರಿ ರಾಜ್ಯದ ನಗರದ ಹಲವು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಈಗಾಗಲೇ ಹೊಂದಿರುವ ವಾಣಿಜ್ಯ ಅನಿಲ ಸಿಲಿಂಡರ್‌ಗಳೊಂದಿಗೆ ಒತ್ತಡದಲ್ಲಿ ಕಾರ್ಯ ನಿರ್ವಹಿಸುವುದನ್ನು ಮುಂದುವರೆಸಿವೆ ಮತ್ತು ಸ್ಟಾಕ್ ಖಾಲಿಯಾದ ನಂತರ ಅವುಗಳನ್ನು ಮುಚ್ಚಬೇಕಾಗುತ್ತದೆ ಎಂದು ಸಿಬ್ಬಂದಿ ಹೇಳಿದ್ದಾರೆ.

**ಸಮಿತಿ ರಚನೆ**

ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಸರಿದೂಗಿಲು ಕೇಂದ್ರ ಪೆಟ್ರೋಲಿಯಂ ಸಚಿವಾಲಯವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ತೈಲ ಸಂಸ್ಕರಣಾಗಾರಗಳಲ್ಲಿ ಉತ್ಪಾದನೆಯನ್ನು ಶೇಕಡಾ 10 ರಷ್ಟು ಹೆಚ್ಚಿಸಿದೆ. ಜೊತೆಗೆ ಇತರೆ ವಾಣಿಜ್ಯೇತರ ವಲಯಗಳ ಬೇಡಿಕೆಗಳನ್ನು ಪರಿಶೀಲಿಸಲು ಮತ್ತು ಪೂರೈಕೆಯಲ್ಲಿ ಆದ್ಯತೆ ನಿಗದಿಪಡಿಸಲು ಮೂರು ಪ್ರಮುಖ ತೈಲ ಕಂಪನಿಗಳ ಕಾರ್ಯನಿರ್ವಾಹಕ ನಿರ್ದೇಶಕರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸುವ ಮೂಲಕ ಬಿಕ್ಕಟ್ಟು ಪರಿಹಾರವಾಗಿದೆ ಎಂದು ಸರ್ಕಾರ ತಿಳಿಸಿದೆ.

ಈ ಬಗ್ಗೆ ಪೆಟ್ರೋಲಿಯಂ ಸಚಿವಾಲಯ ಪ್ರಕಟಣೆ ನೀಡಿದ್ದು, ಗೃಹ ಬಳಕೆಯ ಗ್ರಾಹಕರಿಗೆ ಅಡೆತಡೆ ಇಲ್ಲದೆ ಸಿಲಿಂಡರ್ ಪೂರೈಕೆ ಮಾಡುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಸಚಿವಾಲಯ ಕ್ರಮ ಕೈಗೊಂಡಿದ್ದು, ದೇಶದ ಗೃಹ ಬಳಕೆಯ ಗ್ರಾಹಕರಿಗೆ ಮೊದಲ ಆದ್ಯತೆಯ ಮೇರೆಗೆ ಪೂರೈಕೆ ಮಾಡಲಾಗುವುದು. ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳಂತಹ ಅತ್ಯಗತ್ಯ ವಾಣಿಜ್ಯೇತರ ವಲಯಗಳಿಗೆ ಅವರ ಬೇಡಿಕೆಗೆ ಅನುಗುಣವಾಗಿ ಎಲ್‌ಪಿಜಿ ಪೂರೈಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದೆ.

## ಕೇಂದ್ರಕ್ಕೆ ಸಿದ್ದರಾಮಯ್ಯ ಪತ್ರ

• ಪ್ರಜೋದಯ ವರದಿ



**ಬೆಂಗಳೂರು :** ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚುತ್ತಿರುವ ಹಿನ್ನಲೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿಗೆ ಪತ್ರ ಬರೆದು ತಕ್ಷಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮನವಿ ಮಾಡಿದ್ದಾರೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಇತ್ತೀಚೆಗೆ ಹೊರಡಿಸಿದ ಆದೇಶದ ಹಿನ್ನಲೆ ಎಲ್‌ಪಿಜಿ ಉತ್ಪಾದನೆಗೆ ಗೃಹ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಗೆ ಮೇಲೆ ಭಾರೀ ಹೊಡೆತ ಬಿದ್ದಿದ್ದು, ಹೋಟೆಲ್ ಹಾಗು ರೆಸ್ಟೋರೆಂಟ್‌ಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಮಾ.12ರಿಂದ ಚಿಕ್ಕಬೊಮ್ಮನಹಳ್ಳಿ ರಂಗನಾಥಸ್ವಾಮಿ ಜಾತ್ರೆ

• ಪ್ರಜೋದಯ ವರದಿ





**ಅರಕಲಗೂಡು :** ತಾಲ್ಲೂಕಿನ ದೇವಾಲಯಗಳ ಗ್ರಾಮ ಚಿಕ್ಕಬೊಮ್ಮನಹಳ್ಳಿಯ ಶ್ರೀ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ ಮಾ.12 ರಿಂದ 14 ರವರೆಗೆ ಜರುಗಲಿದೆ ಎಂದು ಆದಿಚುಂಚನಗಿರಿ ಹಾಸನ ಮತ್ತು ಕೊಡಗು ಶಾಖಾ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ ಅವರು ತಿಳಿಸಿದರು.

ಜಾತ್ರಾ ಮಹೋತ್ಸವವನ್ನು ಆದಿ ಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಮಾ. 12 ರಂದು ಸಂಜೆ ಗೋಧೂಳಿ ಲಗ್ನದಲ್ಲಿ ದೇವಾಲಯದ ಆವರಣದಲ್ಲಿ ಧರ್ಮಧ್ವಜ ಸ್ಥಾಪನಾ ಕಾರ್ಯಕ್ರಮ ನಡೆಯಲಿದೆ. ಮಾ.13 ರ ಬೆಳಿಗ್ಗೆ ಕ್ಷೇತ್ರದ ಅಧಿದೇವತೆ ಶ್ರೀ ರಂಗನಾಥ ಸ್ವಾಮಿಗೆ ಪುಣ್ಯಾಹ, ವಿವಿಧ ಅಭಿಷೇಕಗಳು, ಸುದರ್ಶನಹೋಮ, ಗಣಪತಿಹೋಮ, ಮಹಾಪೂಜೆ, ಷೋಡಷೋಪಚಾರಪೂಜೆ, ಮಹಾರತಿ ಸೇರಿ ವಿಶೇಷ ಪೂಜೆ ಕೈಂಕರ್ಯಗಳು ಜರುಗಿ ಸಂಜೆಯ ಗೋಧೂಳಿ ಲಗ್ನದಲ್ಲಿ ಮಹಾ ರಥೋತ್ಸವವು ಜರುಗುವುದೆಂದು ಹೇಳಿದರು.

ಸಂಜೆ ಕ್ಷೇತ್ರಕ್ಕೆ ಆಗಮಿಸುವ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಮುತ್ತಿನಪಲ್ಲಕ್ಕಿ ಉತ್ಸವದಲ್ಲಿ ದೇವಾಲಯದ ಬಳಿಗೆ ಕರೆತರಲಾಗುವುದು. ನಂತರ ಜರುಗುವ ಧಾರ್ಮಿಕ ಸಭೆಯಲ್ಲಿ ನಿರ್ಮಲಾನಂದನಾಥ ಶ್ರೀಗಳು ಆಶೀರ್ವಚನ ನೀಡಲಿದ್ದು, ಶಾಸಕ ಎ.ಮಂಜು, ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ತಾಲ್ಲೂಕಿನ ವಿವಿಧ ಮಠಗಳ ಮತ್ತು ಆದಿ ಚುಂಚನಗಿರಿ ಮಠದ ವಿವಿಧ ಶಾಖಾ ಮಠಗಳ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ ಎಂದರು.

ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಪ್ರಗತಿಪರ ರೈತ ಎಂ.ಸಿ. ರಂಗಸ್ವಾಮಿ ಮತ್ತು ಗುಂಡುರಾಜು ಅವರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ

» ನಾಲ್ಕನೇ ಪುಟದಲ್ಲಿ

# ಕೌಶಿಕ ಗ್ರಾಮದ ಕೊಳವೆ ಬಾವಿ ನೀರು ಪರೀಕ್ಷೆಗೆ ಸೂಚನೆ

### ವಿಧಾನ ಪರಿಷತ್‌ನಲ್ಲಿ ಸೂರಜ್ ರೇವಣ್ಣ ಪ್ರಶ್ನೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಂದನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಕೌಶಿಕ ಗ್ರಾಮದ ಅಂತರ್ಜಲ ಕೈಗಾರಿಕಾ ತ್ಯಾಜ್ಯದಿಂದ ಕಲುಷಿತವಾಗಿದ್ದರೆ, ಕೇಂದ್ರದಿಂದ ತಂಡ ಕಳಿಸಿ ಮತ್ತೊಮ್ಮೆ ಪರಿಶೀಲನೆ ನಡೆಸಿ, ನ್ಯೂನತೆ ಇದ್ದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದ್ದಾರೆ.

ವಿಧಾನ ಪರಿಷತ್‌ನ ಪ್ರಶ್ನೋತ್ತರ ಕಲಾಪದ ವೇಳೆ ಡಾ.ಸೂರಜ್ ರೇವಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕೌಶಿಕ ಗ್ರಾಮಸ್ಥರಿಂದ ಕೊಳವೆ ಬಾವಿಗಳಿಗೆ ಕೈಗಾರಿಕಾ ತ್ಯಾಜ್ಯ ಬಿಡುತ್ತಿರುವ ಬಗ್ಗೆ ದೂರು ಸ್ವೀಕೃತವಾಗಿಲ್ಲ. ಕೌಶಿಕ ಗ್ರಾಮದಿಂದ 2 ಕಿ.ಮೀ. ದೂರದಲ್ಲಿರುವ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ಕೆಲವು ಕೈಗಾರಿಕೆಗಳು ಮಂಡಳಿಯಿಂದ ಸಮ್ಮತಿ ಪತ್ರ ಪಡೆದು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಸನ ಪ್ರಾದೇಶಿಕ ಅಧಿಕಾರಿಗಳು ಗ್ರಾಮದ ಸುತ್ತಮುತ್ತಲಿನ ಕೊಳವೆ ಬಾವಿಗಳಿಂದ ನೀರಿನ ಮಾದರಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದ್ದು, ವರದಿ ಪ್ರಕಾರ ಕೊಳವೆ ಬಾವಿಗಳ ನೀರು ಕಲುಷಿತವಾಗಿರುವುದಿಲ್ಲ ಮತ್ತು ಕುಡಿಯುವ ನೀರಿನ ಗುಣಮಟ್ಟಕ್ಕೆ ಅನುಮತಿಸಿದ ಮಿತಿಯೊಳಗಿದೆ ಎಂದು ತಿಳಿಸಿದರು.

**ತಾಲ್ಲೂಕಿನಲ್ಲೇ ಬಂದೂಕು ಪರವಾನಗಿ ನೀಡಿ**

ಬಂದೂಕು ಪರವಾನಿಗೆ ನವೀಕರಣಕ್ಕಾಗಿ ರೈತರು ಮತ್ತು ಪರವಾನಿಗೆಯುಳ್ಳವರು ಜಿಲ್ಲಾ ಕೇಂದ್ರಕ್ಕೆ ತೆರಳಬೇಕಾದ ಅನಿವಾರ್ಯತೆ ಇರುವುದರಿಂದ ಆಗುತ್ತಿರುವ ತೊಂದರೆಯನ್ನು ಮನಗಂಡು ತಾಲ್ಲೂಕು ಮಟ್ಟದಲ್ಲೇ ನವೀಕರಣ ವ್ಯವಸ್ಥೆ ಕಲ್ಪಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಸದನದಲ್ಲಿ ಆಗ್ರಹಿಸಿದರು.





ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿದ ಅವರು, ಮಲೆನಾಡು ಪ್ರದೇಶಗಳಲ್ಲಿ ಅನೇಕ ರೈತರು ತಮ್ಮ ಬೆಳೆಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ಹಾಗು ಕಳ್ಳರ ಕಾಟದಿಂದ ರಕ್ಷಣೆ ಪಡೆಯಲು ಕಾನೂನು ಬದ್ಧವಾಗಿ ಬಂದೂಕು ಪರವಾನಿಗೆ ಪಡೆದು ಕೊಂಡಿದ್ದಾರೆ. ಆದರೆ, ಪರವಾನಿಗೆ ನವೀಕರಣದ ಪ್ರಕ್ರಿಯೆಗಾಗಿ ಪ್ರತೀ ಬಾರಿ ಜಿಲ್ಲಾ ಕೇಂದ್ರಕ್ಕೆ ಹೋಗ ಬೇಕಾಗಿರುವು ದರಿಂದ ರೈತರಿಗೆ ಸಮಯ ಹಾಗೂ ಹಣದ ವ್ಯಯವಾಗುತ್ತಿದೆ ಎಂದು ಕಲಾಪದ ಗಮನ ಸೆಳೆದರು.

ವಿಶೇಷವಾಗಿ ಮಲೆನಾಡಿನಂತಹ ದೂರದ ಪ್ರದೇಶಗಳಿಂದ ಜಿಲ್ಲಾ ಕೇಂದ್ರಕ್ಕೆ ತೆರಳುವುದು ರೈತರಿಗೆ ಕಷ್ಟಕರವಾಗಿದ್ದು, ಹಲವು ಕಿಲೋ ಮೀಟರ್‌ಗಳಷ್ಟು ದೂರ ಪ್ರಯಾಣ ಮಾಡಬೇಕಾಗುತ್ತದೆ. ಈ ಹಿನ್ನಲೆ ಬಂದೂಕುಗಳನ್ನು ಜಿಲ್ಲಾಧಿಕಾರಿ ಕಚೇರಿಗೆ ಕೊಂಡೊಯ್ಯುವ ಬದಲು ತಾಲ್ಲೂಕು ಕಚೇರಿಗಳಲ್ಲೇ ಪರಿಶೀಲನೆ ಹಾಗು ನವೀಕರಣ ಪ್ರಕ್ರಿಯೆ ನಡೆಸುವ ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತರಬೇಕೆಂದು ಅವರು ಗೃಹ ಸಚಿವರಲ್ಲಿ ಮನವಿ ಮಾಡಿದ್ದಾರೆ.

ಈ ಕ್ರಮ ಜಾರಿಗೆ ಬಂದರೆ ರೈತರು ಹಾಗೂ ಪರವಾನಿಗೆಯುಳ್ಳ ನಾಗರಿಕರಿಗೆ ಆಗುತ್ತಿರುವ ಅನಾವಶ್ಯಕ ತೊಂದರೆ ತಪ್ಪುವುದರ ಜೊತೆಗೆ ಆಡಳಿತಾತ್ಮಕ ಕಾರ್ಯವೂ ಸುಗಮವಾಗಲಿದೆ. ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ತಾಲ್ಲೂಕು ಮಟ್ಟದಲ್ಲೇ ವ್ಯವಸ್ಥೆ ಕಲ್ಪಿಸಬೇಕೆಂದು ಅವರು ಒತ್ತಾಯಿಸಿದರು.

# ಸಕಲೇಶಪುರದಲ್ಲಿ ಅಕ್ರಮ ಮರಳು ಗಣಿಗಾರಿಕೆ ಅಬ್ಬರ

### ಹೇಮಾವತಿ ನದಿ ಪಾತ್ರದಲ್ಲಿ ನಿರಂತರ ಸಾಗಣೆ । ಕ್ರಮ ಕೈಗೊಳ್ಳಲು ಅಧಿಕಾರಿಗಳ ನಿರ್ಲಕ್ಷ್ಯ : ಜನರ ಆಕ್ರೋಶ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಹೇಮಾವತಿ ನದಿ ಪಾತ್ರದಲ್ಲಿ ನಿರಂತರವಾಗಿ ಅಕ್ರಮ ಮರಳು ಗಣಿಗಾರಿಕೆ ಹೆಚ್ಚುತ್ತಿದ್ದು, ಕಡಿವಾಣ ಹಾಕುವವರು ಯಾರೆಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಎದ್ದಿದೆ.

ಅಕ್ರಮ ಮರಳು ಸಾಗಣೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ಹಲವು ಬಾರಿ ವಿಡಿಯೋ, ಫೋಟೋಗಳು ಹಾಗು ಪತ್ರಿಕಾ ವರದಿಗಳ ಮೂಲಕ ಮಾಹಿತಿ ನೀಡಲಾಗಿದ್ದರೂ ಇದುವರೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ. ಇದರಿಂದ ಅಕ್ರಮ ಮರಳುಗಾರರಿಗೆ ಇನ್ನಷ್ಟು ಧೈರ್ಯ ಸಿಕ್ಕಂತಾಗಿದೆ ಎಂದು ಜನರು ದೂರಿದ್ದಾರೆ.

ಮಳಲಿ ಲೇಔಟ್ ಸಮೀಪದಲ್ಲಿ ಸಂಗ್ರಹಿಸಲಾಗಿರುವ ಸುಮಾರು ನೂರಕ್ಕೂ ಹೆಚ್ಚು ಲೋಡ್ ಮರಳನ್ನು ಈವರೆಗೆ ಅಧಿಕಾರಿಗಳು ವಶಕ್ಕೆ ಪಡೆದಿಲ್ಲ ಎನ್ನಲಾಗುತ್ತಿದೆ. ಅಕ್ರಮ ಮರಳುಗಾರಿಕೆ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಇಲಾಖೆಗಳು ಮರಳನ್ನು ಜಪ್ತಿ ಮಾಡುವು ದರಲ್ಲಿಯೂ ಹಾಗು ಪ್ರಕರಣ ದಾಖಲಿಸು ವುದರಲ್ಲಿಯೂ ನಿರ್ಲಕ್ಷ್ಯ ತೋರಿಸುತ್ತಿವೆ ಎಂಬ ಆರೋಪಗಳು ಕೇಳಿ ಬರುತ್ತಿವೆ.ಇದನ್ನೇ ಅವಕಾಶವನ್ನಾಗಿ ಮಾಡಿಕೊಂಡಿರುವ ಅಕ್ರಮ ಮರಳನ್ನು ಹಗಲು- ರಾತ್ರಿ ಎನ್ನದೆ ನಿರ್ಬಂಧವಿಲ್ಲದೆ ಮರಳು ಸಾಗಾಟ ಮಾಡುತ್ತಿದ್ದಾರೆಂದು ಸ್ಥಳೀಯರು ದೂರಿದ್ದಾರೆ.

» ನಾಲ್ಕನೇ ಪುಟದಲ್ಲಿ

**ಅಕ್ರಮವಾಗಿ ಸಂಗ್ರಹಿಸಿದ್ದ ಮರಳು ವಶ**



**ಸಕಲೇಶಪುರ:** ಪಟ್ಟಣದ ಶ್ರೀನಿವಾಸ ಕಲ್ಯಾಣ ಮಂಟಪದಿಂದ ಕೆಳಭಾಗಕ್ಕೆ ಹೋಗುವ ರಸ್ತೆಯ ಬಳಿಯಲ್ಲಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಮರಳನ್ನು ಕಂದಾಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಅಚಂಗಿ ಗ್ರಾಮದ ಸರ್ವೆ ನಂ. 58/1 ಮತ್ತು 58/2 ಪ್ರದೇಶದಿಂದ ಅಕ್ರಮವಾಗಿ ಸಂಗ್ರಹ ಮಾಡಲಾಗಿದ್ದ ಮರಳಿನ ಕುರಿತು ಮಾಹಿತಿ ಲಭಿಸಿದ ಹಿನ್ನಲೆ, ಕಂದಾಯ ನಿರೀಕ್ಷಕ ದಾನು ಪ್ರಕಾಶ್ ಅವರ ನೇತೃತ್ವದಲ್ಲಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಕ್ರಮವಾಗಿ ಸಂಗ್ರಹಿಸಲಾಗಿದ್ದ 6 ರಿಂದ 7 ಟಿಪ್ಪರ್ ಲೋಡಿನಷ್ಟು ಮರಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಅಕ್ರಮ ಮರಳು ಸಂಗ್ರಹಣೆ ಸರ್ಕಾರದ ನಿಯಮಗಳನ್ನು ಉಲ್ಲಂಘಿಸುವುದರ ಜೊತೆಗೆ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟು ಮಾಡುವ ಕಾರ್ಯ ವಾಗಿದ್ದು, ಈ ಹಿನ್ನಲೆ ಕಂದಾಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ರೈಲ್ವೆ ಮಾರ್ಗಕ್ಕೆ ಭೂಸ್ವಾಧೀನ: ಪರಿಹಾರ ಹೆಚ್ಚಿಸಿ

### ಆಲೂರು ತಾಲ್ಲೂಕಿನ ತಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ರೈತರ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಆಲೂರು-ಬೇಲೂರು ನಡುವೆ ಹೊಸ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಅವೈಜ್ಞಾನಿಕ ಪರಿಹಾರ ನೀಡಲಾಗುತ್ತಿದೆ. ಭೂಮಿ ಕಳೆದುಕೊಳ್ಳುವವರಿಗೆ ಹೆಚ್ಚಿನ ಪರಿಹಾರ ನೀಡುವಂತೆ ಆಲೂರು ತಾಲ್ಲೂಕಿನ ತಾಳೂರು ಗ್ರಾಮದ ರೈತರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವೆಂಕಟೇಶ್ ಅವರು, ತಾಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಟೆಹೊಳೆ, ಎತ್ತಿನಹೊಳೆ ಯೋಜನೆಗಾಗಿ ಈಗಾಗಲೇ ಈ ಭಾಗದ ರೈತರು ಸಾಕಷ್ಟು ಜಮೀನು ಕಳೆದುಕೊಂಡಿದ್ದಾರೆ. ಈಗ ರೈಲ್ವೆ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ಇರುವ ಅಲ್ಪ ಭೂಮಿಯನ್ನು ಕಳೆದುಕೊಳ್ಳುವಂತಾಗಿದೆ ಎಂದು ಹೇಳಿದರು.



ಒಂದು ಎಕರೆ ಭೂಮಿಗೆ ಸರ್ಕಾರ ನಿಗದಿ ಪಡಿಸುವ ಬೆಲೆಯ ಅನ್ವಯ ಕೇವಲ 4 ರಿಂದ 5 ಲ.ರೂ. ಇದ್ದು, ವಾಸ್ತವವಾಗಿ ಎಕರೆಗೆ 25 ರಿಂದ 30 ಲ.ರೂ.ಗೆ ಜಮೀನು ಮಾರಾಟ ಮಾಡಲಾಗುತ್ತಿದೆ. ಸರ್ಕಾರಿ ದರದ ಅನ್ವಯ ನಾಲ್ಕು ಪಟ್ಟು ನೀಡಲಾಗುವುದೆಂದು ಹೇಳಿದರೂ ಆ ಬೆಲೆ ಯಾವ ಕಡೆಗೂ ಸಾಕಾಗುವುದಿಲ್ಲ. ಈಗಾಗಲೇ ಎರಡು ಯೋಜನೆಗೆ ರೈತರು ಭೂಮಿ ಕಳೆದುಕೊಂಡಿದ್ದಾರೆ. ಮತ್ತೆ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿರುವುದರಿಂದ ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ವಿಶೇಷ ಒತ್ತು ನೀಡಿ ಹೆಚ್ಚಿನ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಈ ಬಗ್ಗೆ ರೈಲ್ವೆ ಸಚಿವ ವಿ.ಸೋಮಣ್ಣ, ಶಾಸಕ ಸಿಮೆಂಟ್ ಮಂಜು ಅವರ ಗಮನಕ್ಕೆ ತಂದ ವೇಳೆ ಸ್ಪಂದಿಸಿ, ಕ್ರಮ ಕೈಗೊಳ್ಳುವಂತೆ ಹಿಂದಿನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರಿಗೆ ಸೂಚಿಸಿದ್ದರು. ಅವರು ಈ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಈಗಿನ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿಗೆ ಅವರು ಯಾವ ಕ್ರಮವನ್ನೂ ಕೈಗೊಂಡಿಲ್ಲ, ಭೇಟಿ ಮಾಡಲು ಅವಕಾಶ

» ನಾಲ್ಕನೇ ಪುಟದಲ್ಲಿ

## ಮಗು ಹತ್ಯೆ: ಅಪರಾಧಿಗೆ 11 ವರ್ಷ ಕಾರಾಗೃಹ

• ಪ್ರಜೋದಯ ವರದಿ

**ಹಾಸನ:** ದನಗಳ ಮೈ ತೊಳೆಯುವ ವಿಚಾರವಾಗಿ ನಡೆದ ಗಲಾಟೆಯಲ್ಲಿ ಒಂದು ವರ್ಷದ ಮಗುವಿನ ಸಾವಿಗೆ ಕಾರಣವಾಗಿದ್ದ ಅಪರಾಧಿಗೆ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 11 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗು 40 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ನಂಜುಂಡೇಗೌಡ ಶಿಕ್ಷೆಗೆ ಗುರಿಯಾದ ಅಪರಾಧಿ, ನಿರೀಕ್ಷ ಮೃತಪಟ್ಟ ಒಂದು ವರ್ಷದ ಮಗು.

ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ದುಮ್ಮಿಗೆರೆ ಗ್ರಾಮದ ನಂಜುಂಡೇಗೌಡ, ಸತೀಶ್ ಎಂಬುವವರು ದನಗಳ ಮೈ ತೊಳೆಯುವ ನೀರು ಕುಡಿಯುವ ನೀರಿಗೆ ಹಾರುತ್ತಿತ್ತು. ಈ ಬಗ್ಗೆ ಮಹಿಳೆಯರು ಪ್ರಶ್ನಿಸಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಲಾಗಿತ್ತು. ಈ ವೇಳೆ ಮೃತ ಮಗು ನಿರೀಕ್ಷಳ ತಾಯಿಗೆ ದೊಣ್ಣೆಯಿಂದ ಹೊಡೆಯಲು ಯತ್ನಿಸಿದಾಗ ಆ ಏಟು ಮಗುವಿನ ತಲೆಗೆ ಬಿದ್ದು ಗಂಭೀರ ಗಾಯಗಳಾಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದೆ ಮಗು ಮೃತಪಟ್ಟಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ತನಿಖೆ ನಡೆಸಿ, ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ಕಲಂ 302 ಐಪಿಸಿ ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.



ಪ್ರಕರಣದ ವಿಚಾರಣೆ ನಡೆಸಿದ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ವಿ. ಹಿದಾಯತ್ ಉಲ್ಲಾ ಷರೀಫ್ ಅವರು ಪ್ರಕರಣದ ಸಾಕ್ಷಿದಾರರು ಪೂರಕವಾಗಿ ಸಾಕ್ಷ್ಯ ನುಡಿದ ಕಾರಣ ಆರೋಪಿ ನಂಜುಂಡೇಗೌಡ ಅವರ ಮೇಲಿರುವ ದೋಷಾರೋಪಣೆ ಸಾಬೀತಾಗಿದೆ ಎಂದು ತೀರ್ಮಾನಿಸಿ, ಐಪಿಸಿ ಕಲಂ 307 ರಡಿ ಎಸಗಿದ ಅಪರಾಧಕ್ಕಾಗಿ 4 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ ಮತ್ತು 20 ಸಾವಿರ ರೂ. ದಂಡ, ಐಪಿಸಿ ಕಲಂ 304-11 ರಡಿ ಎಸಗಿದ ಅಪರಾಧಕ್ಕಾಗಿ 5 ವರ್ಷ ಕಠಿಣ ಕಾರಗೃಹವಾಸ ಶಿಕ್ಷೆ ಮತ್ತು 20 ಸಾವಿರ ರೂ. ದಂಡ. ಹಾಗು ಜಗಳದ ವೇಳೆ ನಡೆದ ನಷ್ಟಕ್ಕೆ ಪರಿಹಾರವಾಗಿ 40 ಸಾವಿರ ರೂ. ನೀಡಲು ಆದೇಶಿಸಿ ತೀರ್ಪು ಪ್ರಕಟಿಸಿದ್ದಾರೆ.

# ಬಾಣಾವರ ಸರ್ಕಾರಿ ಆಸ್ಪತ್ರೆಗಿಲ್ಲ ಮೇಲ್ದರ್ಜೆ ಭಾಗ್ಯ

• ಪ್ರಜೋದಯ ವರದಿ

**ಬಾಣಾವರ:** ಜಿಲ್ಲೆಯ ಪ್ರಮುಖ ಹೋಬಳಿ ಕೇಂದ್ರವಾಗಿರುವ ಅರಸೀಕೆರೆ ತಾಲ್ಲೂಕಿನ ಬಾಣಾವರ ಸರ್ಕಾರಿ ಆಸ್ಪತ್ರೆಗೆ ಮೇಲ್ದರ್ಜೆ ಭಾಗ್ಯ ದೊರಕದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣ ಮಾತ್ರವಲ್ಲ, ತುರ್ತು ಸಂದರ್ಭದಲ್ಲಿ ರೋಗಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ತಾಲೂಕು ಕೇಂದ್ರವಾಗಬೇಕಿದ್ದ ಬಾಣಾವರ ಹೋಬಳಿ ಕೇಂದ್ರ, ಕೆಲವು ತಾಂತ್ರಿಕ ಕಾರಣಗಳಿಂದ ಗ್ರಾಮ ಪಂಚಾಯಿತಿಯಾಗಿ ಹಿಂಬಡ್ತಿ ಹೊಂದಿತ್ತು. ಇದೀಗ ರಾಜ್ಯ ಸರ್ಕಾರ ಬಾಣಾವರವನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿದೆ. ಪಟ್ಟಣದ ಅಭಿವೃದ್ಧಿಗೆ ಹೊಸ ಅವಕಾಶಗಳು ಮೂಡಿವೆ. ಆದಾಗ್ಯೂ, ಆರೋಗ್ಯ ಸೇವೆಗಳ ವಿಷಯದಲ್ಲಿ ಮಾತ್ರ ನಿರೀಕ್ಷಿತ ಪ್ರಗತಿ ಕಂಡು ಬಂದಿಲ್ಲ.

ಪಟ್ಟಣದ ಒಳಭಾಗದಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತಿರುವುದರಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುವುದು ಸಾಮಾನ್ಯವಾಗಿದೆ. ಅಪಘಾತಕ್ಕೊಳಗಾದವರನ್ನು ತುರ್ತು ಚಿಕಿತ್ಸೆಗಾಗಿ ಬಾಣಾವರ ಸರ್ಕಾರಿ ಆಸ್ಪತ್ರೆಗೆ ತರಲಾಗುತ್ತಿದ್ದರೂ, ಇಲ್ಲಿ ಸಮರ್ಪಕ ವೈದ್ಯಕೀಯ ಸೌಲಭ್ಯಗಳ ಕೊರತೆ ಇರುವುದರಿಂದ ರೋಗಿಗಳು ಸಂಕಷ್ಟ ಅನುಭವಿಸಬೇಕಾದ ಪರಿಸ್ಥಿತಿ ಎದುರಾಗಿದೆ.

> ■ ಹೆದ್ದಾರಿ ಮಧ್ಯೆ ಇರುವ ಪ್ರಮುಖ ಕೇಂದ್ರವಾದರೂ ಮೂಲಸೌಕರ್ಯ ಕೊರತೆ
>
> ■ ಸಾರ್ವಜನಿಕರಿಂದ ಸಮುದಾಯ ಆರೋಗ್ಯ ಕೇಂದ್ರದ ಬೇಡಿಕೆ


ಬಾಣಾವರ ಮಾತ್ರವಲ್ಲದೆ ಅಕ್ಕಪಕ್ಕದ ಕಡೂರು ಸೇರಿ ಇತರೆ ತಾಲ್ಲೂಕುಗಳ ಗ್ರಾಮಗಳ ನೂರಾರು ಜನರು ಈ ಆಸ್ಪತ್ರೆಯನ್ನು ಅವಲಂಬಿಸಿದ್ದಾರೆ. ಬಾಣಾವರ ಪ್ರದೇಶವು ಬರ ಪೀಡಿತವಾಗಿದ್ದು, ಹೆಚ್ಚಿನ ಜನರು ರೈತರು, ಕೂಲಿ ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳಾಗಿದ್ದಾರೆ. ಆರೋಗ್ಯ ಸಮಸ್ಯೆಗಳ ಸಂದರ್ಭದಲ್ಲಿ ಇವರಿಗೆ ಸಮೀಪದ ಸರ್ಕಾರಿ ಆಸ್ಪತ್ರೆಯೇ ಪ್ರಮುಖ ಆಶ್ರಯವಾಗಿದೆ.



> ಬಾಣಾವರ ಸರ್ಕಾರಿ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವುದು ಈ ಭಾಗದ ಜನರ ಬಹುದಿನಗಳ ಬೇಡಿಕೆಯಾಗಿದೆ. ಪಟ್ಟಣದಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತಿರುವುದರಿಂದ ಅಪಘಾತಗಳ ಸಂದರ್ಭಗಳಲ್ಲಿ ತುರ್ತು ಚಿಕಿತ್ಸೆ ನೀಡಲು ಉತ್ತಮ ವೈದ್ಯಕೀಯ ಸೌಲಭ್ಯ ಅಗತ್ಯವಾಗಿದೆ. ಸರ್ಕಾರ ತಕ್ಷಣ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು.
>
> -ಬಿ.ಹೆಚ್.ಸಂಜಯ್, ಬಾಣಾವರ ಗ್ರಾಮ ಪಂಚಾಯಿತಿ ಅಧ್ಯಕ್ಷ



> ಬಾಣಾವರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದೆ. ಹೀಗಾಗಿ ಸರ್ಕಾರ ಬಾಣಾವರ ಆಸ್ಪತ್ರೆಗೆ ವಿಶೇಷ ಅನುದಾನ ಮಂಜೂರು ಮಾಡಿ, ಸುಸಜ್ಜಿತ ವೈದ್ಯಕೀಯ ಸೌಲಭ್ಯಗಳು ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.
>
> -ಬಿ.ರವಿಶಂಕರ್, ಮಾಜಿ ಸದಸ್ಯ, ತಾಲ್ಲೂಕು ಪಂಚಾಯಿತಿ



ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇರಿ ಹಲವು ಶಿಕ್ಷಣ ಸಂಸ್ಥೆಗಳಿದ್ದು, ತಾಲ್ಲೂಕು ಕೇಂದ್ರವಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರೂ ಇಲ್ಲಿ ಕೇವಲ ಪ್ರಾಥಮಿಕ ಆರೋಗ್ಯ ಕೇಂದ್ರ ಮಾತ್ರ ಕಾರ್ಯ ನಿರ್ವಹಿಸುತ್ತಿರುವುದು ವಿಷಾದನೀಯವಾಗಿದೆ. ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗಾಗಿ ಬಾಣಾವರದ ಮಹಿಳೆಯರು ಅರಸೀಕೆರೆ ಹಾಗು ಇತರೆ ಪಟ್ಟಣಗಳಿಗೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರಸ್ತುತ ಆಸ್ಪತ್ರೆಯ ಸಿಬ್ಬಂದಿ ತಮ್ಮ ಮಟ್ಟಿಗೆ ಉತ್ತಮ ಸೇವೆ ನೀಡುತ್ತಿದ್ದರೂ, ಅನುಭವ ಸಂಪನ್ನ ವೈದ್ಯರ ಕೊರತೆ ಹಾಗು ಸುಸಜ್ಜಿತ ಚಿಕಿತ್ಸಾ ಸೌಲಭ್ಯಗಳ ಅಭಾವ ಸಾರ್ವಜನಿಕರಿಗೆ ಸಂಕಷ್ಟ ಉಂಟು ಮಾಡುತ್ತಿದೆ. ಆದ್ದರಿಂದ ಬಾಣಾವರ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆ ಗೇರಿಸಿ, ತುರ್ತು ಚಿಕಿತ್ಸಾ ಘಟಕ, ಖಾಯಂ ವೈದ್ಯರ ನೇಮಕಾತಿ ಮತ್ತು ಮಹಿಳಾ ಆರೋಗ್ಯ ಅಧಿಕಾರಿಗಳ ವ್ಯವಸ್ಥೆ ಕಲ್ಪಿಸಬೇಕೆಂಬುದು ಸಾರ್ವಜನಿಕರ ಬಹುಕಾಲದ ಬೇಡಿಕೆಯಾಗಿದೆ.

## ಇಂದಿನಿಂದ ವೈದ್ಯರ ಅನಿರ್ದಿಷ್ಟಾವಧಿ ಮುಷ್ಕರ

• ಪ್ರಜೋದಯ ವರದಿ


**ಹಾಸನ:** ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬುಧವಾರದಿಂದ ಸರ್ಕಾರಿ ವೈದ್ಯರು ಅನಿರ್ದಿಷ್ಟಾವಧಿ ಮುಷ್ಕರ ಕೈಗೊಂಡಿರುವುದರಿಂದ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಮೊದಲ ಹಂತವಾಗಿ ಮಾ.11 ರಿಂದ 15ರವರೆಗೆ ತುರ್ತು ಸೇವೆ ಹೊರತು ಪಡಿಸಿ ಹೊರರೋಗಿ ಸೇವೆ ಸ್ಥಗಿತಗೊಳಿಸಿ ಮುಷ್ಕರ ಮಾಡಲಾಗುವುದು. ಎರಡನೇ ಹಂತವಾಗಿ ಮಾ.16 ರಿಂದ ಬೇಡಿಕೆ ಈಡೇರುವವರೆಗೂ ಎಲ್ಲಾ ವೈದ್ಯರು ಹಾಗು ಸಿಬ್ಬಂದಿ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರ ಮುಂದುವರಿಸಲಾಗುವುದೆಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಎಚ್ಚರಿಸಿದೆ.

**ಬೇಡಿಕೆಗಳು :** ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಮಾಡಬೇಕು. ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕು. ಎಲ್ಲಾ ಅರ್ಹ ವೈದ್ಯರು ಮತ್ತು ಸಿಬ್ಬಂದಿಗೆ ಮುಂಬಡ್ತಿ ನೀಡುವುದು, ಸೇವಾನಿರತ ವೈದ್ಯರು ಹಾಗು ಸಿಬ್ಬಂದಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಸೇರಿ ಗುತ್ತಿಗೆ ವೈದ್ಯರು ಹಾಗೂ ನೌಕರರ ಸಮಸ್ಯೆ ನಿವಾರಿಸಬೇಕೆಂದು ಒತ್ತಾಯಿಸಿದ್ದಾರೆ.







**ಧೋನಿ ಇರುವ ತನಕ ಮ್ಯಾಚ್ ಇದೆ ಎಂಬ ಕಾಲವೂ ಸರಿದು ಹೋಗಿ ಆಗಿತ್ತು. ಕೊಹ್ಲಿಯ ಒನ್ ಮ್ಯಾನ್ ಶೋ ತಂಡವೂ ಇತಿಹಾಸ. ಈಗಿರುವ ಟಿ-ಟ್ವೆಂಟಿ ತಂಡದಲ್ಲಿ ಯಾರು ಸಿಡಿಯುತ್ತಾರೆ ಎಂಬುದು ಎದುರಾಳಿ ತಂಡಕ್ಕೆ ಸದಾ ಸಸ್ಪೆನ್ಸ್. ಎದುರಾಳಿಗಳು ಯಾರನ್ನೋ ಕಟ್ಟಿ ಹಾಕಲು ಸಿದ್ಧರಾಗಿರುತ್ತಾರೆ. ಆದರೆ ಔಟ್ ಆಫ್ ಸಿಲೆಬಸ್ ಎಂಬಂತೆ ಇನ್ಯಾರೋ ಬಂದು ಮಾರಣ ಹೋಮ ನಡೆಸಿ ಬಿಡುತ್ತಾರೆ.**

# ಸೋತಾಗ ಗಂಭೀರನಾಗಿ... ಗೆದ್ದಾಗ ಗೌತಮನಾಗಿ...!

ಪದಸಾಗರ

ಈ ಬಾರಿಯ ಚುಟುಕು ಕ್ರಿಕೆಟ್‌ನ ವಿಶ್ವಕಪ್ ಭಾರತವಲ್ಲದೆ ಇನ್ಯಾರೂ ಗೆಲ್ಲಲು ಸಾಧ್ಯವೇ ಇಲ್ಲ ಎಂದು ಟೂರ್ನಿ ಶುರುವಾಗುವ ಮೊದಲೇ ಅನಿಸಿತ್ತು. ಏಕದಿನ ಸರಣಿ ಮತ್ತು ಟೆಸ್ಟ್‌ಗಳಲ್ಲಿ ಭಾರತವು ವೈಫಲ್ಯ ಕಂಡು ತವರಿನ ಮುಖಭಂಗ ಅನುಭವಿಸಿದ್ದು ನಿಜ. ಆದರೆ ಟಿ-ಟ್ವೆಂಟಿಯಲ್ಲಿ ಮಾತ್ರ ಭಾರತ ತಂಡದ ಖದರ್ರೇ ಬೇರೆಯಾಗಿ ಬಿಡುತ್ತಿತ್ತು.

ಸೂರ್ಯಕುಮಾರ್ ಯಾದವ್ ನಾಯಕತ್ವ ವಹಿಸಿಕೊಂಡ ನಂತರದಲ್ಲಿ ನಮ್ಮ ಟಿ-ಟ್ವೆಂಟಿ ತಂಡದ ಸ್ವರೂಪವೇ ಬದಲಾಗಿ ಹೋಗಿತ್ತು. ಅಲ್ಲಿ ಒಬ್ಬೇ ಒಬ್ಬ ಆಟಗಾರನೂ ಟೆಸ್ಟ್ ಅಥವಾ ಐವತ್ತು ಓವರ್ ಪಂದ್ಯದ ಮನಸ್ಥಿತಿಯವನಿಲ್ಲ. ವೈಯಕ್ತಿಕ ದಾಖಲೆ ಬರೆಯುವ, ಶತಕ ಬಾರಿಸುವ ಆಲೋಚನೆ ಒಬ್ಬರಿಗೂ ಇಲ್ಲ. ಎಲ್ಲರದ್ದೂ ಒಂದೇ ಗುರಿ.

ಬಾ... ಬಂದು ಹತ್ತೋ ಹದಿನೈದು ಬಾಲ್ ಆಡಿ, ಮೂವತ್ತೋ ನಲವತ್ತೋ ಚಚ್ಚು.. ಹೋಗ್ತಾ ಇರು. ಬ್ಯಾಟಿಂಗ್ ಲೈನಪ್ ಕೂಡ ಅದೇ ರೀತಿಯದ್ದು. ಯಾರೇ ಔಟಾದರೂ ಮುಂದೇನಪ್ಪಾ ಎಂಬ ಯೋಚನೆ ಇಲ್ಲ. ಸಚಿನ್ ಹೋದರೆ ಟಿವಿ ಆಫ್ ಮಾಡುತ್ತಿದ್ದ ಕಾಲ ಎಂದೋ ಮುಗಿದು ಹೋಗಿತ್ತು.

ಧೋನಿ ಇರುವ ತನಕ ಮ್ಯಾಚ್ ಇದೆ ಎಂಬ ಕಾಲವೂ ಸರಿದು ಹೋಗಿ ಆಗಿತ್ತು. ಕೊಹ್ಲಿಯ ಒನ್ ಮ್ಯಾನ್ ಶೋ ತಂಡವೂ ಇತಿಹಾಸ. ಈಗಿರುವ ಟಿ-ಟ್ವೆಂಟಿ ತಂಡದಲ್ಲಿ ಯಾರು ಸಿಡಿಯುತ್ತಾರೆ ಎಂಬುದು ಎದುರಾಳಿ ತಂಡಕ್ಕೆ ಸದಾ ಸಸ್ಪೆನ್ಸ್. ಎದುರಾಳಿಗಳು ಯಾರನ್ನೋ ಕಟ್ಟಿ ಹಾಕಲು ಸಿದ್ಧರಾಗಿರುತ್ತಾರೆ. ಆದರೆ ಔಟ್ ಆಫ್ ಸಿಲೆಬಸ್ ಎಂಬಂತೆ ಇನ್ಯಾರೋ ಬಂದು ಮಾರಣಹೋಮ ನಡೆಸಿ ಬಿಡುತ್ತಾರೆ.

ಸ್ಯಾಮ್ಸನ್ ಆಡದಿದ್ದರೆ ಅಭಿಷೇಕ್, ಅಭಿಷೇಕ್ ಆಡದಿದ್ದರೆ ಇಶಾನ್, ಮೂರೂ ವಿಕೆಟ್ ಬೇಗ ಬಿದ್ದರೆ ಸೂರ್ಯಕುಮಾರ್, ಇವ್ರೆಲ್ಲ ಅಗ್ಗದಲ್ಲಿ ವಿಕೆಟ್ ಒಪ್ಪಿಸಿದರೆ ದುಬೆ, ಇನ್ನೊಂದಿನ ತಿಲಕ್ ವರ್ಮ, ಮತ್ತೊಂದಿನ ವಾಷಿಂಗ್ಟನ್ ಸುಂದರ! ಬೌಲರ್ ಅಂದು ಕೊಂಡರೆ ಬ್ಯಾಟಿಂಗಲ್ಲಿ ಅಬ್ಬರಿಸಿ ಬಿಡುವ ಅಕ್ಸರ್, ಸಿಕ್ಕಿರೋ ಅಲ್ಪಸ್ವಲ್ಪ ಬಾಲುಗಳ ಹಬ್ಬ ಮಾಡುವ ರಿಂಕೂ ಸಿಂಗ್, ಆಟಿಟ್ಯೂಡ್ ಕಾ ಬಾಪ್ ಎಂಬಂತೆ ಆಡುವ ಹಾರ್ದಿಕ್ ಪಾಂಡ್ಯ... ಹೀಗೆ ಯಾವತ್ತು ಯಾರು ಸ್ಟಾರ್ ಆಗುತ್ತಾರೆ ಅಂತ ಗೊತ್ತಾಗದಷ್ಟು ಶಕ್ತಿಶಾಲಿ ತಂಡವಾಗಿ ಈಗಿನ ಭಾರತ ಮಾರ್ಪಟ್ಟಿದೆ.

ಬೌಲಿಂಗಲ್ಲಾದರೂ ಅಷ್ಟೆ, ಬುಮ್ರಾನಂಥ ಯುಗಪುರುಷನ ಸುತ್ತ ಒಮ್ಮೆ ಅರ್ಶದೀಪ್ ಕ್ಲಿಕ್ ಆದರೆ, ಇನ್ನೊಮ್ಮೆ ಸಿರಾಜ್ ಗೆಲ್ಲಿಸುತ್ತಾನೆ. ಕುಲದೀಪ್ ತಂಡದೊಳಗೆ ಬಂದಾಗೆಲ್ಲ ವಿಕೆಟ್ ಕಿತ್ತುಕೊಟ್ಟೇ ಹೋಗುತ್ತಾನೆ. ಅಕ್ಸರ್, ಸುಂದ್ರ, ವರುಣ್ ಚಕ್ರವರ್ತಿ ಇವ್ರೆಲ್ಲ ಹಾಗೊಂದಿಷ್ಟು ರನ್ ಸೋರಿಕೆ ಮಾಡಿದ್ರೂ ಅಗತ್ಯ ಬಿದ್ದಾಗೆಲ್ಲ ವಿಕೆಟ್ ಕೀಳದೇ ಇರೋದಿಲ್ಲ.

ಲೆಕ್ಕಕ್ಕೇ ಇಟ್ಕೊಳ್ದೇ ಇರೋ ಶಿವಂ ದುಬೆ ಕೂಡ ಈ ತಂಡದ ಲಕ್ಕೀ ಚಾರ್ಮ್ ಎಂಬಂತೆ ಬ್ಯಾಟಿಂಗು, ಬೌಲಿಂಗು ಯಾವುದಾದರೊಂದರಲ್ಲಿ ಕೊಡುಗೆ ಕೊಟ್ಟುಬಿಡುತ್ತಾನೆ. ಇನ್ನು ಫೀಲ್ಡಿಂಗ್ ವಿಷಯಕ್ಕೆ ಬಂದ್ರೆ, ಆ ರಿಂಕೂ ಸಿಂಗ್ ಒಬ್ಬನೇ ಮೂವತ್ತು ರನ್ ಉಳಿಸಿ ಕೊಟ್ಟಿರುತ್ತಾನೆ.

ಅಕ್ಸರ್ ಪಟೇಲ್, ಹಾರ್ದಿಕ್, ತಿಲಕ್ ವರ್ಮಾ, ಇಶಾನ್ ಒಬ್ಬೊಬ್ಬರೂ ಅರ್ಥ ಗ್ರೌಂಡ್ ಕಾಯಬಲ್ಲ ಫೀಲ್ಡರ್‌ಗಳು. ಕೈಯಲ್ಲಿ ಅದ್ಯಾವ ಮ್ಯಾಗ್ನೆಟ್ ಇದೆಯೋ, ಕಾಲಲ್ಲಿ ಅದ್ಯಾವ ಸ್ಪ್ರಿಂಗ್ ಇದೆಯೋ ಎಂಬಂತೆ ಅತಿಮಾನುಷ ಶಕ್ತಿ ಹೊಂದಿರುವವರ ಹಾಗೆ ಬಾಲ್ ಹಿಡಿಯುತ್ತಾರೆ.

ಹಿಂಜರಿಕೆ, ಆತಂಕ, ಅನುಮಾನ ಇಂಥ ಪದಗಳ ಪರಿಚಯವೇ ಇಲ್ಲ ಈ ತಂಡಕ್ಕೆ. ಇವರಲ್ಲದೆ ಇನ್ಯಾರು ಕಪ್ ಮೇಲೆ ಕೈ ಇರಿಸೋಕೆ ಸಾಧ್ಯ? ಆದರೂ ವಿನಾಕಾರಣ ಈ ತಂಡವನ್ನು ಅನುಮಾನಿಸುವ ಒಂದು ಬಳಗವಿತ್ತು. ಈ ತಂಡ ಸೋಲಲಿ ಎಂದು ಹಿಡಿಮಣ್ಣು ಹಿಡಿದುಕೊಂಡು ಕೂತವರೂ ಇದ್ದರು. ರಾಜಕೀಯ ಕಾರಣಗಳಿಗೆ ಸೋಲು ಬಯಸುತ್ತಿದ್ದ ವರ್ಗವೂ ಇಲ್ಲಿತ್ತು. ಗಂಭೀರ್ ಮೇಲಿನ ದ್ವೇಷಕ್ಕೆ, ಪ್ರಧಾನಿ ಮೋದಿ ಮೇಲಿನ ದ್ವೇಷಕ್ಕೆ ಈ ತಂಡ ಸೋಲಲೆಂದು ಹರಕೆ ಹೊತ್ತವರಿದ್ದರು.

ಹಿಸ್ಟರಿ ಭಾರತದ ಪರವಿರಲಿಲ್ಲ. ಟಿ-ಟ್ವೆಂಟಿ ಕಪ್ ಯಾರೂ ಬ್ಯಾಕ್ ಟು ಬ್ಯಾಕ್ ಗೆದ್ದಿರಲಿಲ್ಲ. ತವರಿನಲ್ಲಿ ಯಾರೂ ಕಪ್ ಎತ್ತಿರಲಿಲ್ಲ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಮ್ಮಲ್ಲಿ ಭಾರತ ಕಪ್ ಗೆದ್ದಿರೋ ಇತಿಹಾಸ ಇರಲಿಲ್ಲ. ನ್ಯೂಜಿಲೆಂಡ್ ಮೇಲೆ ಇಂಥ ಮಾಡು ಇಲ್ಲವೇ ಮಡಿ ಪಂದ್ಯಗಳಲ್ಲಿ ಭಾರತ ಸದಾ ಮಡಿದಿತ್ತು.

ಇವೆಲ್ಲದರ ನಡುವೆಯೂ ಭಾರತವಲ್ಲದೆ ಇನ್ಯಾವ ಟೀಮ್ ಕೂಡ ಕಪ್ ಗೆಲ್ಲುವ ಫೇವರಿಟ್ಸ್ ಆಗಿ ಕಾಣಲೇ ಇಲ್ಲ. ಈ ಕಪ್ ನಾವು ಗೆಲ್ಲಲೇಬೇಕಿತ್ತು. ಹೌದು. ಇನ್ನಿಲ್ಲದ ದ್ವೇಷಕ್ಕೆ ತುತ್ತಾದ ಗಂಭೀರ್‌ಗಾಗಿ ಈ ಕಪ್ ಗೆಲ್ಲಲೇಬೇಕಿತ್ತು. ನಿಜಕ್ಕೂ ಅಷ್ಟು ದ್ವೇಷಿಸುವಂಥದ್ದು ಗಂಭೀರ್ ಏನು ಮಾಡಿದ್ದ? ಕೋಚ್ ಆದವನು ವಿಶ್ವಕಪ್ ಟೂರ್ನಿಗೆ ಪ್ರಯೋಗಕ್ಕೆ ಮುಂದಾಗಿದ್ದು ತಪ್ಪಾ? ಭಿನ್ನ ಟೀಮ್ ಕಾಂಬಿನೇಶನ್ ಮತ್ತು ಬ್ಯಾಟಿಂಗ್ ಆರ್ಡರ್ ಪ್ರಯೋಗ ಮಾಡಿದ್ದು ತಪ್ಪಾ? ಬೌಲರ್‌ಗಳನ್ನು ಬೇರೆ ಬೇರೆ ಸಮಯದಲ್ಲಿ ಪರೀಕ್ಷೆಗೆ ಒಳಪಡಿಸಿದ್ದು ತಪ್ಪಾ? ಪ್ರತಿಭೆ ಇದ್ದೂ ವೈಫಲ್ಯ ಕಾಣುತ್ತಿರುವ ಆಟಗಾರರಿಗೆ ಮತ್ತೆ ಮತ್ತೆ ಅವಕಾಶ ಕಲ್ಪಿಸಿದ್ದು ತಪ್ಪಾ? ನೂರಾ ನಲವತ್ತು ಕೋಟಿ ಜನಸಂಖ್ಯೆಯಲ್ಲಿ ಲಕ್ಷಾಂತರ ಕ್ರಿಕೆಟ್ ಟ್ಯಾಲೆಂಟ್‌ಗಳ ಮಧ್ಯ ಹದಿನೈದೋ ಇಪ್ಪತ್ತೋ ಮಂದಿಯನ್ನು ಆಯ್ಕೆ ಮಾಡುವುದು, ಅವರಲ್ಲಿ ಹನ್ನೊಂದು ಮಂದಿಯನ್ನು ಆಡಿಸುವುದು ಸಣ್ಣ ಮಾತಾ? ಭಾರತ ಕ್ರಿಕೆಟ್ ತಂಡಕ್ಕೆ ನಾಯಕನಾಗುವ, ಕೋಚ್ ಆಗುವ, ಭಾರತದಂಥ ದೇಶಕ್ಕೆ ಪ್ರಧಾನಿಯಾಗುವ ಕಷ್ಟ ಬಲ್ಲವರೇ ಬಲ್ಲರು!

ಗಂಭೀರ್‌ನಷ್ಟು ದ್ವೇಷಕ್ಕೆ ಗುರಿಯಾದ ಕೋಚ್ ಇನ್ನೊಬ್ಬ ಇರಲಿಕ್ಕಿಲ್ಲ. ಸುಲಭಕ್ಕೆ ನಗು ಬಾರದ ಮುಖ, ಮೈದಾನದೊಳಗೆ ಕೊಂಚ ಜಗಳಗಂಟ ಸ್ವಭಾವದ ಗಂಭೀರ್ ಬಹುಶಃ ಐಪಿಎಲ್ ಸಮಯದಲ್ಲಿ ಕೊಹ್ಲಿಯೊಂದಿಗೆ ವಾಗ್ಯುದ್ಧ ನಡೆಸಿದ್ದೇ ಇಂದಿನ ತನಕದ ದ್ವೇಷಕ್ಕೆ ಕಾರಣವಿದ್ದರೂ ಇರಬಹುದು. ಅದರ ಹೊರತಾಗಿ ಅವನನ್ನು ದ್ವೇಷಿಸಲು ಮತ್ಯಾವ ಕಾರಣವೂ ಇಲ್ಲ.

ರೋಹಿತ್-ಕೊಹ್ಲಿ-ಜಡೇಜ ನಿವೃತ್ತಿ ನಂತರ ಹೊಸ ತಂಡ ಕಟ್ಟುವಲ್ಲಿ ಅವನ ಶ್ರಮ ದೊಡ್ಡದು. ಐಪಿಎಲ್ ಮನಸ್ಥಿತಿಯಿಂದ ಆಟಗಾರರನ್ನು ಹೊರತಂದು ಬೇರೆ ಮಾದರಿಯ ಕ್ರಿಕೆಟ್‌ಗೆ ಒಗ್ಗಿಸುವುದು, ಪ್ರತಿಯೊಬ್ಬನ ಐಪಿಎಲ್ ಸ್ಟಾರ್‌ಗಿರಿಯನ್ನು ನಿಭಾಯಿಸುತ್ತಾ ದೇಶಕ್ಕಾಗಿ ಆಡುವಂತೆ ಮಾಡುವುದು, ಗೆಲುವಿಗೆ ನಾಯಕ ಕಾರಣ ಸೋಲಿಗೆ ಕೋಚ್ ಕಾರಣ ಎಂಬ ಜನಾಲೋಚನೆಯನ್ನು ಅರಗಿಸಿಕೊಂಡು ರಿಸಲ್ಟ್ ಕೊಡಲು ಒದ್ದಾಡುವುದು ಸಣ್ಣ ಮಾತಲ್ಲ.

ಈ ಕಪ್ ಗೆಲ್ಲದೇ ಹೋಗಿದ್ದರೆ ಮೊದಲ ತಲೆ ಉರುಳುತ್ತಿದ್ದದ್ದೇ ಗಂಭೀರ್‌ನದ್ದು. ಸಂಜು ಸ್ಯಾಮ್ಸನ್ ಸೂಪರ್-8ರ ಕೊನೆಯ ಪಂದ್ಯದಲ್ಲಿ ಅಬ್ಬರಿಸಿದಾಗ ಪಂದ್ಯವನ್ನು ಗೆಲ್ಲಿಸುವ ಜತೆಯ ತನ್ನ ಸ್ಥಾನವನ್ನು ಭದ್ರ ಮಾಡಿಕೊಂಡಿದ್ದ. ಆದರೆ ಆ ನಂತರದ ಎರಡು ಭರ್ಜರಿ ಆಟದ ಮೂಲಕ ಆತ ಉಳಿಸಿದ್ದು ಗಂಭೀರ್ ತಲೆಯನ್ನು.

ಸಂಜು ಸ್ಯಾಮ್ಸನ್‌ನನ್ನು ಸರಿಯಾದ ಸಮಯಕ್ಕೆ ತಂಡದೊಳಕ್ಕೆ ತಂದಿದ್ದು, ಗಂಭೀರ್‌ನ ನಿರ್ಧಾರ. ಎಡಗೈ ಆಟಗಾರರೇ ಹೆಚ್ಚು ತುಂಬಿರುವ ಈ ತಂಡಕ್ಕೆ ಆರಂಭಿಕನಾಗಿ ಒಬ್ಬ ಬಲಗೈ ದಾಂಡಿಗ ಬೇಕಿತ್ತು. ಸಂಜು ಸ್ಯಾಮ್ಸನ್, ರಾಹುಲ್ ದ್ರಾವಿಡ್ ಗರಡಿಯಲ್ಲಿ ಪಳಗಿದ ಹುಡುಗ. ಸಹನೆಯೇ ಅವನ ಶಕ್ತಿ. ಸಂಜು ಸ್ಯಾಮ್ಸನ್ ಸದಾ ಒತ್ತಡದಲ್ಲೇ ಆಡಿದವ.

ತಂಡದಲ್ಲಿ ಆತನೇ ಒಂದು ಕಡೆ, ಇಡೀ ಟೀಮೇ ಒಂದು ಕಡೆ ಅನಿಸುವಂತಿರುತ್ತಿತ್ತು. ಆರಂಭಿಕ ಸ್ಥಾನಕ್ಕೆ ಭಾರತದಲ್ಲಿ ವಿಪರೀತ ಎಂಬಷ್ಟು ಸ್ಪರ್ಧೆ ಇರುವಾಗ ಸಂಜು ಸ್ಯಾಮ್ಸನ್ ವಿಫಲನಾಗುವಂತೆಯೇ ಇಲ್ಲ. ಈ ಒತ್ತಡವೇ ಅವನನ್ನು ಬೇಗ ಔಟಾಗುವಂತೆ ಮಾಡುತ್ತಿತ್ತು.

ಹೊರಗಿನವರಿಗೆ ಅನಿಸುತ್ತಿತ್ತು, ಇವನು ಎಷ್ಟು ಚಾನ್ಸ್ ಕೊಟ್ಟರೂ ಆಡೋದಿಲ್ಲ ಅಂತ. ಆದರೆ ಆತ ಪ್ರತಿ ಮ್ಯಾಚನ್ನೂ, ವಿಫಲನಾದರೆ ಇದು ತನ್ನ ಕೊನೆ ಮ್ಯಾಚ್ ಆಗುತ್ತದೇನೋ ಎಂಬ ಒತ್ತಡದಲ್ಲೇ ಆಡುತ್ತಿದ್ದ. ಆತನಿಗೆ ಬೆಂಗಾವಲಾಗಿ ನಿಂತಿದ್ದು ಗಂಭೀರ್. ದ್ರಾವಿಡ್ ಗರಡಿಯಲ್ಲಿ ಪಳಗಿದ ಆಟಗಾರನನ್ನು ವೈಫಲ್ಯದಿಂದ ಅಳೆಯಬಾರದೆಂದು ಗಂಭೀರ್ ಅರಿತಿದ್ದ.

ಸಂಜು ಸ್ಯಾಮ್ಸನ್ ವಿಶ್ವಕಪ್ ತಂಡದಲ್ಲಿರಬೇಕು ಎಂದು ನಿರ್ಧರಿಸಿದ್ದು ಗಂಭೀರ್. ಆದರೆ ಹಿಂದಿನ ಸರಣಿಗಳಲ್ಲಿ ಗುಡುಗಿದ್ದ ಅಭಿಷೇಕ್ ಮತ್ತು ಇಶಾನ್ ಕಿಶನ್‌ರ ಫಾರ್ಮ್ ಅನ್ನು ಕಡೆಗಣಿಸುವಂತಿರಲಿಲ್ಲ. ಹೀಗಾಗಿ ಲೀಗ್ ಹಂತದಲ್ಲಿ ಅವರ ಮೂಲಕ ಇನ್ನಿಂಗ್ಸ್ ಆರಂಭಿಸಲಾಗಿತ್ತು.

ಯಾವ ಆಟಗಾರನೂ ಒತ್ತಡದಲ್ಲಿ ಸಿಲುಕುವಂತೆ ಮಾಡಬಾರದೆಂದು ಎಲ್ಲರನ್ನೂ ಎಲ್ಲ ಕ್ರಮಾಂಕಗಳಲ್ಲಿ ಆಡಿಸಿ ಅಭ್ಯಾಸ ಮಾಡಿಸಲಾಗಿತ್ತು. ಅದೇ ಈ ಬಾರಿ ಕಪ್ ಗೆಲುವಿಗೆ ಕಾರಣವಾಯ್ತು. ಅಂದು ಗಂಭೀರ್ ಸುಖಾಸುಮ್ಮನೆ ಬ್ಯಾಟಿಂಗ್ ಆರ್ಡರ್ ಬದಲಿಸಿ ಎಲ್ಲರ ಆಟ ಹಾಳು ಮಾಡುತ್ತಿದ್ದಾನೆ, ತಂಡದಿಂದ ಹೊರಗೆ ಒಳಗೆ ಕಳಿಸಿ ಆಟಗಾರರ ಆತ್ಮವಿಶ್ವಾಸ ಕೊಲ್ಲುತ್ತಿದ್ದಾನೆ ಎಂದು ದೂಷಿಸಿದವರಿಗೆ ಈಗ ಅರ್ಥವಾಗಿರಬಹುದು.

ತಂಡದ ಮತ್ತು ದೇಶದ ಹಿತದೃಷ್ಟಿಯಿಂದ ಗಟ್ಟಿ ನಿರ್ಧಾರ ತೆಗೆದುಕೊಳ್ಳುವವರು, ಭವಿಷ್ಯದ ತಂಡ ಕಟ್ಟಲು ಕಟು ತೀರ್ಮಾನ ಮಾಡುವವರು ವಿಲನ್ ಆಗುವುದು ಸಹಜ. ಅಂದಿಗೆ ದ್ರಾವಿಡ್, ಸಚಿನ್, ಲಕ್ಷ್ಮಣ್, ಗಂಗೂಲಿ, ಕುಂಬ್ಳೆ ಮುಂತಾದವರನ್ನು ಹೊರಹಾಕಿದ ಎಂದು ಧೋನಿಯನ್ನು ದ್ವೇಷಿಸಲು ಶುರುಮಾಡಿದವರು ಇಂದಿಗೂ ದ್ವೇಷಿಸುತ್ತಲೇ ಇದ್ದಾರೆ. ಕೊಹ್ಲಿ, ರೋಹಿತ್ ನಿವೃತ್ತಿಗೆ ಗಂಭೀರ್‌ನೇ ಕಾರಣ ಎಂದು ಆತನನ್ನು ದ್ವೇಷಿಸುವ ಮಂದಿ ಅದಕ್ಕಾಗಿ, ಭಾರತ ಕಪ್ ಸೋತು ಗಂಭೀರ್ ತಲೆದಂಡವಾಗಲಿ ಎಂದು ಬಯಸಿದರು.

ನಾಯಕತ್ವದ ಅನುಭವ ಇಲ್ಲದಿದ್ದರೂ ಸೂರ್ಯಕುಮಾರ್‌ನನ್ನು ಟಿ-ಟ್ವೆಂಟಿ ತಂಡಕ್ಕೆ ಕ್ಯಾಪ್ಟನ್ ಮಾಡಿದ್ದು ಗಂಭೀರ್. ಒಂದು ಯುವತಂಡವನ್ನು ನಗುನಗುತ್ತಾ, ಹುರಿದುಂಬಿಸುವ ಜತೆಯ ಆಕ್ರಮಣಕಾರಿ ಮನೋಭಾವ ತುಂಬುವ ನಾಯಕ ಬೇಕಿದ್ದಾಗ ಸೂರ್ಯನಿಗಿಂತ ಬೆಟರ್ ನಾಯಕ ಕಾಣಲಿಲ್ಲ. ಬೇರೆಯವರ ಆಟದಿಂದ ಭಾರತ ಗೆದ್ದಿತು, ಇದರಲ್ಲಿ ಸೂರ್ಯಕುಮಾರ್ ಪಾತ್ರ ಏನೂ ಇಲ್ಲ ಎನ್ನುವವರು, ಸೂರ್ಯಕುಮಾರ್‌ಗೆ ಬ್ಯಾಟಿಂಗೇ ಬರೋದಿಲ್ಲ ಎನ್ನುವವರು ಒಮ್ಮೆ ಆತನ ಬ್ಯಾಟಿಂಗ್ ದಾಖಲೆಯನ್ನು ನೋಡಿ ಬರಬೇಕು. ಲೀಗ್ ಹಂತದಲ್ಲಿ ಆತ ಆಡಿದ ಆಟದಿಂದಲೇ ನಾಕೌಟ್ ಹಂತಕ್ಕೆ ಬರಲು ಸಾಧ್ಯವಾಗಿದ್ದು ಎಂಬುದನ್ನು ಗಮನಿಸಬೇಕು.

ಶಿವಂ ದುಬೆ ಎಂಬ ತಣ್ಣನೆಯ ಕಿಲ್ಲರ್ ಈ ತಂಡಕ್ಕೆ ಹೊರೆ ಎಂದೇ ಎಲ್ಲರೂ ಭಾವಿಸಿದ್ದು. ಆತನ ಮೇಲೆ ವಿಶ್ವಾಸ ಇರಿಸಿದ್ದು ಗೌತಮ್ ಗಂಭೀರ್. ಸ್ಪಿನ್ ಬೌಲಿಂಗನ್ನು ಪುಡಿಗಟ್ಟುವ, ವೇಗದ ಎಸೆತಗಳನ್ನು ಸ್ಟೇಡಿಯಮ್ಮಿನ ಆಚೆ ಹೊಡೆಯುವ ಶಕ್ತಿ ಇರುವ ಒಬ್ಬ ಆಟಗಾರ ನಿದ್ದರೆ ಆತ ದುಬೆ.

ಸ್ಲೋ ಪಿಚ್‌ಗಳಲ್ಲಿ ಆತನ ಮಧ್ಯಮ ವೇಗದ ಎಸೆತಗಳು ಬ್ಯಾಟರ್‌ಗಳನ್ನು ಹೇಗೆ ಯಾಮಾರಿಸುತ್ತವೆ, ಸಿಕ್ಸ್ ಹೊಡೆಯಲು ಕೆಣಕಿ ಕ್ಯಾಚ್ ಆಗುತ್ತವೆ ಎಂಬುದನ್ನು ಅರಿತಿದ್ದ ಗಂಭೀರ್ ಸಮಯ ನೋಡಿ ಬಳಸಲೆಂದೇ ದುಬೆಯನ್ನು ತಂಡದಲ್ಲಿ ಇರಿಸಿದ್ದ. ಗಂಭೀರ್‌ನ ಸ್ಟ್ರಾಟೆಜಿಗಳು, ಪ್ರಯೋಗಗಳು ಬಹಳ ಪರ್ಫೆಕ್ಟ್ ಆಗಿ ಕಾರ್ಯರೂಪಕ್ಕೆ ಬಂದದ್ದು ವಿಶ್ವಕಪ್‌ನಲ್ಲಿ. ಆತ ಅಲ್ಲಿಯವರೆಗೂ ಪ್ರಯೋಗ ಮಾಡಿದ್ದೇ ವಿಶ್ವಕಪ್‌ಗೋಸ್ಕರ.

ಕಪ್ ಗೆದ್ದ ಖುಷಿಯಲ್ಲಿ ನಾಳೆಯೇ ಆತ ರಾಜೀನಾಮೆ ಕೊಟ್ಟರೂ ಕೊಡಬಹುದು. ಆತ ಬಿಜೆಪಿ ಸಂಸದನಾಗಿದ್ದಾಗ ಹೀಗೆಯೇ ಒಂದು ಸಾರ್ಥಕ ಅವಧಿ ಮುಗಿಸಿ, ಗುಡ್ ಬೈ ಹೇಳಿದ್ದ. ಆದರೆ ಆತ ಯಾವತ್ತೂ ತಪ್ಪಾಗಿಯೇ ಅರ್ಥೈಸಲ್ಪಟ್ಟ. ಸೋಲಿಗೆ ಹೊಣೆಗಾರನಾದ ಗೆಲುವಿನ ಸಮಯದಲ್ಲಿ ಅನಾಥನಾದ.

ದ್ರಾವಿಡ್ ಎಂಬ ಯಶಸ್ವಿ ಕೋಚ್‌ನ ಸ್ಥಾನ ತುಂಬುವುದು ಸುಲಭದ ಕೆಲಸವಲ್ಲ. ಅತಿ ದೊಡ್ಡ ಸವಾಲು ಅದು. ಕೋಟ್ಯಂತರ ಮಂದಿಯ ದ್ವೇಷ-ಟೀಕೆಗಳನ್ನು ಮೆಟ್ಟಿನಿಂತು ಗೆಲುವಿಗೆ ಶ್ರಮಿಸಿ, ಯಾವ ಕ್ರೆಡಿಟ್ಟೂ ಸಿಗದೇ ತೆರೆಮರೆಗೆ ತಳ್ಳಲ್ಪಟ್ಟು ಇರುವುದು ಸುಲಭವಲ್ಲ.

ಭಾರತದ ಕೋಚ್ ಸ್ಥಾನ ಹೂವಿನ ಹಾಸಿಗೆ ಅಲ್ಲ. ನಮ್ಮ ಕಣ್ಣಿಗೆ ಕಾಣುವಂತೆ, ಅದು ಪೆವಿಲಿಯನ್‌ನಲ್ಲಿ ಕೂತು ಆಟ ನೋಡುವ ಹುದ್ದೆಯಲ್ಲ. ಕಪ್ ಗೆದ್ದ ಸಮಯದಲ್ಲಿ ಗಂಭೀರ್ ಸಾಗಿ ಬಂದ ಹಾದಿ ನೆನೆದು ಇದನ್ನ ಬರೆಯುವಂತಾಯ್ತು. ಕಂಗ್ರಾಟ್ಸ್ ಗಂಭೀರ್.

**- ನವೀನ್** ಸಾಗರ್





## ವಿನಾಕಾರಣ ಈ ತಂಡವನ್ನು ಅನುಮಾನಿಸುವ ಒಂದು ಬಳಗವಿತ್ತು...

- ಈ ತಂಡ ಸೋಲಲಿ ಎಂದು ಹಿಡಿಮಣ್ಣು ಹಿಡಿದುಕೊಂಡು ಕೂತವರೂ ಇದ್ದರು.
- ರಾಜಕೀಯ ಕಾರಣಗಳಿಗೆ ಸೋಲು ಬಯಸುತ್ತಿದ್ದ ವರ್ಗವೂ ಇಲ್ಲಿತ್ತು.
- ಗಂಭೀರ್ ಮೇಲಿನ ದ್ವೇಷಕ್ಕೆ, ಪ್ರಧಾನಿ ಮೋದಿ ಮೇಲಿನ ದ್ವೇಷಕ್ಕೆ ಈ ತಂಡ ಸೋಲಲೆಂದು ಹರಕೆ ಹೊತ್ತವರಿದ್ದರು.
- ಹಿಸ್ಟರಿ ಭಾರತದ ಪರವಿರಲಿಲ್ಲ.
- ಟಿ-ಟ್ವೆಂಟಿ ಕಪ್ ಯಾರೂ ಬ್ಯಾಕ್ ಟು ಬ್ಯಾಕ್ ಗೆದ್ದಿರಲಿಲ್ಲ, ತವರಿನಲ್ಲಿ ಯಾರೂ ಕಪ್ ಎತ್ತಿರಲಿಲ್ಲ.
- ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಮ್ಮಲ್ಲಿ ಭಾರತ ಕಪ್ ಗೆದ್ದಿರೋ ಇತಿಹಾಸ ಇರಲಿಲ್ಲ.
- ನ್ಯೂಜಿಲೆಂಡ್ ಮೇಲೆ ಇಂಥ ಮಾಡು ಇಲ್ಲವೇ ಮಡಿ ಪಂದ್ಯಗಳಲ್ಲಿ ಭಾರತ ಸದಾ ಮಡಿದಿತ್ತು.
- ಇವೆಲ್ಲದರ ನಡುವೆಯೂ ಭಾರತವಲ್ಲದೆ ಇನ್ಯಾವ ಟೀಮ್ ಕೂಡ ಕಪ್ ಗೆಲ್ಲುವ ಫೇವರಿಟ್ಸ್ ಆಗಿ ಕಾಣಲೇ ಇಲ್ಲ.
- ಈ ಕಪ್ ನಾವು ಗೆಲ್ಲಲೇಬೇಕಿತ್ತು.
- ಹೌದು. ಇನ್ನಿಲ್ಲದ ದ್ವೇಷಕ್ಕೆ ತುತ್ತಾದ ಗಂಭೀರ್‌ಗಾಗಿ ಈ ಕಪ್ ಗೆಲ್ಲಲೇಬೇಕಿತ್ತು.
- ನಿಜಕ್ಕೂ ಅಷ್ಟು ದ್ವೇಷಿಸುವಂಥದ್ದು ಗಂಭೀರ್ ಏನು ಮಾಡಿದ್ದ?
- ಕೋಚ್ ಆದವನು ವಿಶ್ವಕಪ್ ಟೂರ್ನಿಗೆ ಪ್ರಯೋಗಕ್ಕೆ ಮುಂದಾಗಿದ್ದು ತಪ್ಪಾ?
- ಭಿನ್ನ ಟೀಮ್ ಕಾಂಬಿನೇಶನ್ ಮತ್ತು ಬ್ಯಾಟಿಂಗ್ ಆರ್ಡರ್ ಪ್ರಯೋಗ ಮಾಡಿದ್ದು ತಪ್ಪಾ?
- ಬೌಲರ್‌ಗಳನ್ನು ಬೇರೆ ಬೇರೆ ಸಮಯದಲ್ಲಿ ಪರೀಕ್ಷೆಗೆ ಒಳಪಡಿಸಿದ್ದು ತಪ್ಪಾ?
- ಪ್ರತಿಭೆ ಇದ್ದೂ ವೈಫಲ್ಯ ಕಾಣುತ್ತಿರುವ ಆಟಗಾರರಿಗೆ ಮತ್ತೆ ಮತ್ತೆ ಅವಕಾಶ ಕಲ್ಪಿಸಿದ್ದು ತಪ್ಪಾ?
- ನೂರಾ ನಲವತ್ತು ಕೋಟಿ ಜನಸಂಖ್ಯೆಯಲ್ಲಿ ಲಕ್ಷಾಂತರ ಕ್ರಿಕೆಟ್ ಟ್ಯಾಲೆಂಟ್‌ಗಳ ಮಧ್ಯ ಹದಿನೈದೋ ಇಪ್ಪತ್ತೋ ಮಂದಿಯನ್ನು ಆಯ್ಕೆ ಮಾಡುವುದು, ಅವರಲ್ಲಿ ಹನ್ನೊಂದು ಮಂದಿಯನ್ನು ಆಡಿಸುವುದು ಸಣ್ಣ ಮಾತಾ?
- ಭಾರತ ಕ್ರಿಕೆಟ್ ತಂಡಕ್ಕೆ ನಾಯಕನಾಗುವ, ಕೋಚ್ ಆಗುವ, ಭಾರತದಂಥ ದೇಶಕ್ಕೆ ಪ್ರಧಾನಿಯಾಗುವ ಕಷ್ಟ ಬಲ್ಲವರೇ ಬಲ್ಲರು!

---

**» ಆನಂದ್ ಮಲ್ಲಿಗವಾಡ ಅವರು ಆಧುನಿಕ ಯುಗದ ಭಗೀರಥ. ಕೇವಲ ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಪ್ರಕೃತಿಯಲ್ಲಿ ಎಂಥ ಅದ್ಭುತವನ್ನು ಸೃಷ್ಟಿಸಬಹುದು ಎಂಬುದಕ್ಕೆ ಇವರೇ ಸಾಕ್ಷಿ. ಅತಿ ಕಡಿಮೆ ಸಮಯದಲ್ಲಿ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ಕೆರೆಗಳನ್ನು ಪುನರುಜ್ಜೀವನ ಗೊಳಿಸಿದಕ್ಕಾಗಿ ಇವರ ಹೆಸರು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ.**

# ಬತ್ತಿದ ಕೆರೆಗಳಿಗೆ ಜೀವ ತುಂಬಿದ ಭಗೀರಥ: ಆನಂದ ಮಲ್ಲಿಗವಾಡ

ಒಂದೊಳ್ಳೆ ಮಾತು

ಆನಂದ್ ಮಲ್ಲಿಗವಾಡ ಅವರು ಮೂಲತಃ ಹಾವೇರಿ ಜಿಲ್ಲೆಯ ಒಂದು ಪುಟ್ಟ ಹಳ್ಳಿಯವರು. ಹಳ್ಳಿಯ ಕೆರೆ, ಹಸಿರು ನೋಡಿ ಬೆಳೆದ ಅವರಿಗೆ ಸಾವಿರ ಕೆರೆಗಳ ಊರು ಬೆಂಗಳೂರಿನ ಕಲುಷಿತ, ಕಟ್ಟಡಗಳ ಅಡಿಯಲ್ಲಿ ಹೂತು ಹೋದ ಕೆರೆಗಳನ್ನು ನೋಡಿದಾಗ ಮನಸ್ಸಿಗೆ ತುಂಬಾ ನೋವಾಗುತ್ತಿತ್ತು.

2017ರ ಸುಮಾರಿಗೆ ಅವರು ಒಂದು ಖಾಸಗಿ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಆದರೆ, ಅವರ ಮನಸ್ಸು ಮಾತ್ರ ಬತ್ತಿ ಹೋದ ಕೆರೆಗಳ ಬಗ್ಗೆಯೇ ಯೋಚಿಸುತ್ತಿತ್ತು. ಸರಕಾರ ಬರಲಿ, ಯಾರಾದರೂ ಮಾಡಲಿ ಎಂದು ಕಾಯುವ ಬದಲು, ನಾನೇ ಏಕೆ ಮಾಡ ಬಾರದು? ಎಂಬ ಪ್ರಶ್ನೆ ಅವರಲ್ಲಿ ಮೂಡಿತು.

ಅವರ ಮೊದಲ ಗುರಿ ಬೆಂಗಳೂರಿನ ಆನೇಕಲ್ ಪಾಳ್ಯದ ಬಳಿಯ ಕ್ಯಾಲಸನಹಳ್ಳಿ ಕೆರೆ. ಆ ಕೆರೆ ಸಂಪೂರ್ಣವಾಗಿ ಒಣಗಿ, ಹೂಳು ತುಂಬಿ, ಮುಳ್ಳಿನ ಗಿಡಗಳಿಂದ ಆವೃತವಾಗಿತ್ತು. ಆನಂದ್ ಅವರು ಯಾವುದೇ ಆಧುನಿಕ ಯಂತ್ರಗಳಿಗಿಂತ ಹೆಚ್ಚಾಗಿ ಪ್ರಕೃತಿಯ ನಿಯಮಗಳನ್ನೇ ನಂಬಿದರು.

ಅವರು ಸಿಮೆಂಟ್ ಅಥವಾ ಕಾಂಕ್ರೀಟ್ ಬಳಸದೆ, ಕೇವಲ ಸ್ಥಳೀಯ ಮಣ್ಣು ಮತ್ತು ಕಲ್ಲುಗಳನ್ನು ಬಳಸಿ ಕೆರೆಯನ್ನು ಪುನರ್ ನಿರ್ಮಿಸಲು ಯೋಜಿಸಿದರು. ಹಗಲು-ರಾತ್ರಿ ಎನ್ನದೆ ಕೆರೆಯಲ್ಲಿ ನಿಂತು ಹೂಳು ತೆಗೆಯುವ ಕೆಲಸ ಮಾಡಿದರು.

ಕಂಪನಿಯ ಕೆಲಸದ ನಂತರ ಸಿಗುವ ಸಮಯವನ್ನೆಲ್ಲ ಕೆರೆಗಾಗಿ ಮೀಸಲಿಟ್ಟರು. ಕೇವಲ 45 ದಿನಗಳಲ್ಲಿ, ಅತಿ ಕಡಿಮೆ ವೆಚ್ಚದಲ್ಲಿ ಆ ಕೆರೆಗೆ ಹೊಸರೂಪ ನೀಡಿದರು. ಮೊದಲ ಮಳೆ ಬಂದಾಗ ಕೆರೆ ತುಂಬಿದ್ದನ್ನು ನೋಡಿ ಊರ ಜನರಿಗೆ ಆಶ್ಚರ್ಯವಾಯಿತು. ಅಷ್ಟೇ ಅಲ್ಲ ಸುತ್ತಮುತ್ತಲಿನ ಬತ್ತಿದ್ದ ಬಾವಿಗಳಲ್ಲಿ ನೀರು ಉಕ್ಕಿದಾಗ ಆನಂದ್ ಅವರ ಕಣ್ಣಲ್ಲಿ ಆನಂದ ಭಾಷ್ಪವಿತ್ತು.



ಕೆರೆಗಳನ್ನು ಉಳಿಸುವ ಹಾದಿ ಸುಲಭವಾಗಿರಲಿಲ್ಲ. ಭೂಮಾಫಿಯಾ ಮತ್ತು ಇತರರಿಂದ ಅವರಿಗೆ ಬೆದರಿಕೆಗಳು ಬಂದವು. ಆದರೆ ಆನಂದ್ ಅಳುಕಲಿಲ್ಲ. ತಮ್ಮ ಇಡೀ ಉಳಿತಾಯವನ್ನು ಕೆರೆಗಳಿಗಾಗಿ ವ್ಯಯಿಸಿದರು, ಅಂತಿಮವಾಗಿ ತಮ್ಮ ಕೆಲಸಕ್ಕೂ ರಾಜೀನಾಮೆ ನೀಡಿ ಪೂರ್ಣಾವಧಿಯಾಗಿ ಕೆರೆಗಳ ರಕ್ಷಣೆಗೆ ಇಳಿದರು.

ಅವರ ನಿಸ್ವಾರ್ಥ ಸೇವೆಯನ್ನು ಕಂಡ ಕಾರ್ಪೊರೇಟ್ ಕಂಪನಿಗಳು ಅವರ ಸಹಾಯಕ್ಕೆ ಬಂದವು. ಇಂದು ಆನಂದ್ ಮಲ್ಲಿಗವಾಡ ಅವರು 35ಕ್ಕೂ ಹೆಚ್ಚು ಕೆರೆಗಳಿಗೆ ಜೀವ ನೀಡಿದ್ದಾರೆ. ಅವರು ಕೇವಲ ಹೂಳೆತ್ತುವುದಿಲ್ಲ, ಬದಲಿಗೆ ಕೆರೆಯ ಸುತ್ತ ಸಾವಿರಾರು ಗಿಡಗಳನ್ನು ನೆಟ್ಟು ಅದೊಂದು ಸುಂದರ ಜೀವವೈವಿಧ್ಯ ತಾಣವಾಗುವಂತೆ ಮಾಡುತ್ತಾರೆ.



ಅವರ ಈ ಕೆಲಸದಿಂದಾಗಿ ಸಾವಿರಾರು ಹಕ್ಕಿಗಳು ಮತ್ತೆ ಬೆಂಗಳೂರಿನ ಕೆರೆಗಳತ್ತ ಮುಖ ಮಾಡಿವೆ.

ಆನಂದ್ ಮಲ್ಲಿಗವಾಡ ಅವರು ಆಧುನಿಕ ಯುಗದ ಭಗೀರಥ. ಕೇವಲ ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಪ್ರಕೃತಿಯಲ್ಲಿ ಎಂಥ ಅದ್ಭುತವನ್ನು ಸೃಷ್ಟಿಸಬಹುದು ಎಂಬುದಕ್ಕೆ ಇವರೇ ಸಾಕ್ಷಿ. ಅತಿ ಕಡಿಮೆ ಸಮಯದಲ್ಲಿ ಮತ್ತು ಅತ್ಯಂತ ಕಡಿಮೆ ವೆಚ್ಚದಲ್ಲಿ ಕೆರೆಗಳನ್ನು ಪುನರುಜ್ಜೀವನ ಗೊಳಿಸಿದಕ್ಕಾಗಿ ಇವರ ಹೆಸರು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ.

ದಿ ಹಿಂದೂ, ಟೈಮ್ಸ್ ಆಫ್ ಇಂಡಿಯಾ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು, ಇವರ ಕ್ಯಾಲಸನಹಳ್ಳಿ ಕೆರೆಯ ಜೀರ್ಣೋದ್ಧಾರ ಮತ್ತು ಸ್ಯಾಂಡ್ ಪ್ರೋಗ್ರಾಮಗಳ ಬಗ್ಗೆ ಸವಿಸ್ತಾರವಾದ ವರದಿಗಳನ್ನು ಪ್ರಕಟಿಸಿವೆ. ಬಿಬಿಸಿ ಮತ್ತು ಅಲ್ ಜಜೀರಾದಂಥ ಅಂತಾ ರಾಷ್ಟ್ರೀಯ ಮಾಧ್ಯಮಗಳು ಇವರನ್ನು ದ ಲೇಕ್ ಮ್ಯಾನ್ ಆಫ್ ಇಂಡಿಯಾ ಎಂದು ಕರೆದು ವಿಶೇಷ ಲೇಖನಗಳನ್ನು ಪ್ರಕಟಿಸಿವೆ.

ಆನಂದ್ ಮಲ್ಲಿಗವಾಡ ಅವರು ತಮ್ಮ ಕೆರೆ ಸಂರಕ್ಷಣೆಯ ಮಾದರಿಯನ್ನು ಟೇಡಿಕ್ಸ್ ವೇದಿಕೆಯಲ್ಲಿ ಹಂಚಿಕೊಂಡಿದ್ದಾರೆ. ಅಷ್ಟೇ ಅಲ್ಲ, ಕರ್ನಾಟಕ ಸರಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಇವರ ಕಾರ್ಯಕ್ಕೆ ಅಧಿಕೃತವಾಗಿ ಅನುಮತಿ ನೀಡಿ, ಅನೇಕ ಕೆರೆಗಳ ಜವಾಬ್ದಾರಿಯನ್ನು ಇವರಿಗೆ ವಹಿಸಿವೆ.

2024-25ರ ಅವಧಿಯಲ್ಲಿ ಇವರು ಕೇಂದ್ರ ಸರಕಾರದ ವಿವಿಧ ಪರಿಸರ ಸಂಬಂಧಿತ ಸಮಿತಿಗಳಲ್ಲೂ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ನದಿಗಳು ಮತ್ತು ಕೆರೆಗಳು ಕೇವಲ ನೀರಿನ ಮೂಲಗಳಲ್ಲ, ಅವು ಭೂಮಿಯ ರಕ್ತನಾಳಗಳು. ಸೃಷ್ಟಿಗೆ ಪ್ರತಿಯಾಗಿ ನಾವು ಏನನ್ನೂ ನೀಡಬೇಕಿಲ್ಲ, ಕೇವಲ ಸೃಷ್ಟಿಯ ಸಮತೋಲನವನ್ನು ಹಾಳುಮಾಡದಿದ್ದರೆ ಸಾಕು. ಪರ್ಯಾವರಣ ಸಂರಕ್ಷಣೆಯ ಇಂಥ ನಿದರ್ಶನಗಳು ನಮಗೆಲ್ಲ ಪ್ರೇರಣೆಯಾಗಲಿ...

**- ರೂಪಾ** ಗುರುರಾಜ್

---



■ ಶಿವನ ವರವನ್ನು ಪಡೆದು ಅಜೇಯರಾಗಿದ್ದ ಹಂಸ ಮತ್ತು ಡಿಂಭಕರಂಥ ದುಷ್ಟರನ್ನು ಶ್ರೀಕೃಷ್ಣ ತನ್ನ ಅದ್ಭುತ ಲೀಲೆಯಿಂದ ಸಂಹರಿಸಿ, ದೂರ್ವಾಸರಂಥ ಋಷಿಮುನಿಗಳನ್ನು ಕಾಯುವ ಮೂಲಕ ಧರ್ಮ ಸಂಸ್ಥಾಪನೆ ಮಾಡಿದ. ಕೆಲವೊಮ್ಮೆ ಅಟ್ಟಹಾಸದಿಂದ ನಮ್ಮ ಮುಂದೆ ಕೆಟ್ಟತನದಲ್ಲಿ ಮೆರೆಯುವ ಅನೇಕರನ್ನು ನೋಡಿದಾಗ ಇವರಿಗೆ ಭಗವಂತನ ಭಯ ಇಲ್ಲವೇ? ಎಂದು ಯೋಚಿಸುವಂತಾಗುತ್ತದೆ.

# ಹಂಸ-ಡಿಭಂಕರ ಸಂಹಾರ ಮಾಡಿದ ಕೃಷ್ಣನ ಯುಕ್ತಿ

ದ್ವಾಪರ ಯುಗದಲ್ಲಿ ಶ್ರೀಕೃಷ್ಣನು ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣೆಗಾಗಿ ಅವತರಿಸಿದನು. ಕಂಸ, ಜರಾಸಂಧರಂಥ ಪ್ರಬಲ ಶತ್ರುಗಳ ನಡುವೆ, ಶಿವನ ವರಪ್ರಸಾದದಿಂದ ಅಜೇಯರಾಗಿದ್ದ ಹಂಸ ಮತ್ತು ಡಿಂಭಕ ಎಂಬ ಸಹೋದರರ ಅಟ್ಟಹಾಸ ಮಿತಿಮೀರಿತ್ತು.

ಸಾಳ್ವ ದೇಶದ ರಾಜ ಬ್ರಹ್ಮದತ್ತನಿಗೆ ಪರಮೇಶ್ವರನ ಅನುಗ್ರಹದಿಂದ ಜನಿಸಿದವರೇ ಹಂಸ ಮತ್ತು ಡಿಂಭಕ. ಇವರು ಬೆಳೆದು ದೊಡ್ಡವರಾದ ಮೇಲೆ ಶಿವನನ್ನು ಕುರಿತು ಘೋರ ತಪಸ್ಸು ಮಾಡಿದರು. ಶಿವನು ಪ್ರತ್ಯಕ್ಷನಾದಾಗ, ನಮಗೆ ಎಂದಿಗೂ ಸೋಲಾಗಬಾರದು, ದಿವ್ಯಾಸ್ತ್ರಗಳು ಲಭಿಸಬೇಕು ಮತ್ತು ನಿನ್ನ ಇಬ್ಬರು ಪ್ರಮಥ ಗಣಗಳು ನಮಗೆ ರಕ್ಷಕರಾಗಿರಬೇಕು ಎಂದು ವರ ಪಡೆದರು. ಈ ಅಪ್ರತಿಮ ಶಕ್ತಿಯಿಂದಾಗಿ ಅವರು ಯಾರ ಕೈಗೂ ಸಿಗದಷ್ಟು ಬಲಾಢ್ಯರಾದರು.

ಋಷಿಮುನಿಗಳ ಮೇಲೆ ದೌರ್ಜನ್ಯ: ಅಧಿಕಾರದ ಮದದಿಂದ ಹಂಸನು ಋಷಿಮುನಿಗಳಿಗೆ ತೊಂದರೆ ನೀಡತೊಡಗಿದನು. ಬ್ರಾಹ್ಮಣ ಯುವಕರು ತಪಸ್ಸು ಮಾಡುವುದನ್ನು ತಡೆಯಲು ಅವರಿಗೆ ಬಲವಂತವಾಗಿ ವಿವಾಹ ಮಾಡಿಸಿ ಸಂಸಾರ ಹೂಡುವಂತೆ ಮಾಡುತ್ತಿದ್ದನು. ಒಮ್ಮೆ ದೂರ್ವಾಸ ಮುನಿಗಳ ಆಶ್ರಮಕ್ಕೆ ನುಗ್ಗಿ ಅವರ ಶಿಷ್ಯರನ್ನು ಅಪಹರಿಸಿ, ಕುಟೀರಗಳಿಗೆ ಬೆಂಕಿ ಹಚ್ಚಿದನು. ಇದನ್ನು ತಡೆಯಲು ಹೋದ ಡಿಂಭಕನ ಮಾತಿಗೂ ಹಂಸ ಓಗೊಡಲಿಲ್ಲ. ದೂರ್ವಾಸರು ಕೋಪ ಗೊಂಡರೂ, ಶಿವನ ವರದ ಬಲವಿದ್ದ ಕಾರಣ ಹಂಸನನ್ನು ನೇರವಾಗಿ ಶಪಿಸಲಾಗದೆ ಶ್ರೀಕೃಷ್ಣನ ಮೊರೆ ಹೋದರು.

ಶ್ರೀಕೃಷ್ಣನ ತಂತ್ರ ಮತ್ತು ಯುದ್ಧ: ಕೃಷ್ಣನು ದೂರ್ವಾಸರನ್ನು ಸಮಾಧಾನಪಡಿಸಿ, ಅವರಿಗೆ ಶಿವನ ವರವಿದೆ, ಅವರನ್ನು ಯುದ್ಧಕ್ಕಿಂತ ಹೆಚ್ಚಾಗಿ ತಂತ್ರದಿಂದಲೇ ಮುಗಿಸಬೇಕು, ಕಾಲ ಸನ್ನಿಹಿತವಾಗಿದೆ ಎಂದು ಭರವಸೆ ನೀಡಿದನು. ಇತ್ತ ಹಂಸನು ರಾಜಸೂಯಯಾಗ ಮಾಡಲು ನಿರ್ಧರಿಸಿ, ಕೃಷ್ಣನಿಂದಲೇ ಕಪ್ಪ ಪಡೆಯಬೇಕೆಂದು ಹಠ ಹಿಡಿದು ಡಿಂಭಕನನ್ನು ಕಳುಹಿಸಿದನು. ಕೃಷ್ಣನು ಕಪ್ಪ ಕೊಡಲು ನಿರಾಕರಿಸಿ ಯುದ್ಧಕ್ಕೆ ಸಿದ್ಧನಾದನು.

ರಣರಂಗದಲ್ಲಿ ಕೃಷ್ಣ, ಬಲರಾಮ ಮತ್ತು ಸಾತ್ಯಕಿ ಒಂದು ಕಡೆ ಇದ್ದರೆ, ಹಂಸ-ಡಿಂಭಕರ ಜತೆ ಹಿಡಿಂಬಾಸುರನಂಥ ರಾಕ್ಷಸರು ಸೇರಿದ್ದರು. ಬಲರಾಮನು ಇತರ ರಾಕ್ಷಸರನ್ನು ಚದುರಿಸಿದಾಗ, ಕೃಷ್ಣನು ಹಂಸನನ್ನು ಗುರಿಯಾಗಿಸಿಕೊಂಡು ವೈಷ್ಣವಾಸವನ್ನು ಹೂಡಿದನು.

ಅಸ್ತ್ರಕ್ಕೆ ಹೆದರಿ ಓಡಿದ ಹಂಸನು ಯಮುನಾ ನದಿಯ ಕಾಳಿಂಗ ಮಡುವಿಗೆ ಧುಮುಕಿದನು. ಕೃಷ್ಣನು ಅವನನ್ನು ನೀರಿನ ಆಳಕ್ಕೆ ತಳ್ಳಿದಾಗ, ಅಲ್ಲಿ ಹಂಸನು ಧೃತರಾಷ್ಟ್ರ ಎಂಬ ವಿಷಪೂರಿತ ಹಾವಿನ ಬಾಯೊಳಗೆ ಸಿಲುಕಿ ನಂತರ ಸಾವಿರಾರು ವರ್ಷಗಳು ಅ ಬಂಧಿಯಾಗಿರಬೇಕಾಯಿತು.

ತನ್ನ ಪ್ರಾಣಪ್ರಿಯ ಅಣ್ಣ ಕಾಣೆಯಾದದ್ದನ್ನು ಕಂಡು ಡಿಂಭಕನು ಶೋಕಸಾಗರದಲ್ಲಿ ಮುಳುಗಿದನು. ಅಣ್ಣನಿಲ್ಲದ ಬಾಳು ತನಗೆ ಬೇಡವೆಂದು ನಿರ್ಧರಿಸಿದ ಅವನು, ಕೃಷ್ಣನ ಸಮ್ಮುಖದ ತನ್ನ ಶಿರವನ್ನು ತಾನೇ ಕತ್ತರಿಸಿಕೊಂಡು ಪ್ರಾಣತ್ಯಾಗ ಮಾಡಿದನು. ಕೃಷ್ಣನು ಅವನನ್ನು ತಡೆಯಲಿಲ್ಲ, ಏಕೆಂದರೆ ಅಣ್ಣನ ಸಾವಿನ ಸೇಡಿಗಾಗಿ ಡಿಂಭಕನು ಮುಂದೆ ಮತ್ತಷ್ಟು ಕ್ರೂರನಾಗುವ ಸಾಧ್ಯತೆಯಿತ್ತು.

ಹೀಗೆ ಶಿವನ ವರವನ್ನು ಪಡೆದು ಅಜೇಯರಾಗಿದ್ದ ಹಂಸ ಮತ್ತು ಡಿಂಭಕರಂಥ ದುಷ್ಟರನ್ನು ಶ್ರೀಕೃಷ್ಣ ತನ್ನ ಅದ್ಭುತ ಲೀಲೆಯಿಂದ ಸಂಹರಿಸಿ, ದೂರ್ವಾಸರಂಥ ಋಷಿಮುನಿಗಳನ್ನು ಕಾಯುವ ಮೂಲಕ ಧರ್ಮಸಂಸ್ಥಾಪನೆ ಮಾಡಿದ. ಕೆಲವೊಮ್ಮೆ ಅಟ್ಟಹಾಸದಿಂದ ನಮ್ಮ ಮುಂದೆ ಕೆಟ್ಟತನದಲ್ಲಿ ಮೆರೆಯುವ ಅನೇಕರನ್ನು ನೋಡಿದಾಗ ಇವರಿಗೆ ಭಗವಂತನ ಭಯ ಇಲ್ಲವೇ? ಎಂದು ಯೋಚಿಸುವಂತಾಗುತ್ತದೆ.

ಸತ್ಯದ ಹಾದಿಯಲ್ಲಿ ನಡೆಯುವವರಿಗೆ ಕಷ್ಟ ಜಾಸ್ತಿ ಎಂತಲೂ ಅನಿಸುತ್ತದೆ. ಆದರೆ ಭಗವಂತನಿಗೆ ಯಾವಾಗ, ಎಲ್ಲಿ, ಯಾರಿಗೆ, ಹೇಗೆ ಬುದ್ಧಿ ಕಲಿಸಬೇಕು ಎನ್ನುವ ವಿಷಯ ಚೆನ್ನಾಗಿ ತಿಳಿದಿದೆ. ಅದನ್ನು ದೂರದೃಷ್ಟಿಯಿಂದ ನೋಡಲಾಗದ ನಮಗೆ ಕೆಲವೊಮ್ಮೆ ಅಪನಂಬಿಕೆಗಳು ಮೂಡಿ ಖಿನ್ನತೆ ಕಾಡುವುದು ಸಹಜ. ಆದರೆ ತನ್ನನ್ನು ನಂಬಿದವರನ್ನು ಭಗವಂತ ಎಂದಿಗೂ ಕೈಬಿಡುವುದಿಲ್ಲ. ಪುರಾಣದ ಈ ಕಥೆಗಳು ಇಂಥ ನಂಬಿಕೆಗಳನ್ನು ನಮ್ಮಲ್ಲಿ ಮತ್ತೆ ಮತ್ತೆ ಗಟ್ಟಿಗೊಳಿಸುತ್ತಾ ಹೋಗುತ್ತವೆ.

# ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸುಪ್ರೀಂ ಅಸ್ತು

## ದೇಶಾದ್ಯಂತ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಏಕೈಕ ಮಾರ್ಗ ಯುಜಿಸಿ

• ಪ್ರಜೋದಯ ವರದಿ

**ನವದೆಹಲಿ:** ಏಕರೂಪ ನಾಗರಿಕ ಸಂಹಿತೆ ಪರ ಸುಪ್ರೀಂಕೋರ್ಟ್ ಬ್ಯಾಟ್ ಬೀಸಿದ್ದು, ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಏಕೈಕ ಮಾರ್ಗವೆಂದರೆ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು (ಯುಜಿಸಿ) ಜಾರಿಗೆ ತರುವುದು ಎಂದು ಅತ್ಯುನ್ನತ ನ್ಯಾಯಾಲಯ ಮಂಗಳವಾರ ಹೇಳಿದೆ.

ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅಡಿಯಲ್ಲಿ ಮಹಿಳೆಯರ ಹಕ್ಕುಗಳ ಉಲ್ಲಂಘನೆಯನ್ನು ಆರೋಪಿಸಿ ಒಂದು ಬ್ಯಾಚ್ ಅರ್ಜಿಯ ವಿಚಾರಣೆ ನಡೆಸುತ್ತಿರುವ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಆರ್ ಮಹದೇವನ್ ಮತ್ತು ಜಾಯ್ಮಲ್ಯ ಬಾಗ್ಚಿ ಅವರಿದ್ದ ನ್ಯಾಯಪೀಠ ಈ ತೀರ್ಪು ನೀಡಿದೆ.

ಮುಸ್ಲಿಂ ಸಮಾಜದ ಒಂದು ದೊಡ್ಡ ವರ್ಗವು ಸಮಾನ ಉತ್ತರಾಧಿಕಾರದ ಹಕ್ಕುಗಳಿಂದ ವಂಚಿತವಾಗಿದೆ ಎಂಬುದು ನಿಜ. ಆದರೆ ಶರಿಯಾ ಕಾನೂನಿನ ಉತ್ತರಾಧಿಕಾರದ ನಿಬಂಧನೆಯನ್ನು ತೆಗೆದುಹಾಕಿದರೆ, ನಂತರ ಯಾವ ಕಾನೂನು ಉತ್ತರಾಧಿಕಾರವನ್ನು ನಿಯಂತ್ರಿಸಬೇಕು? ಏಕರೂಪ ನಾಗರಿಕ ಸಂಹಿತೆ ಸರಿಯಾದ ಉತ್ತರವಾಗಿದೆ. ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಭಾರತದಾದ್ಯಂತ ಏಕರೂಪ ಸಂಹಿತೆ ಜಾರಿಗೆ ತರುವುದು ಎಂದು ಹೇಳಿತು.

ಅರ್ಜಿದಾರರ ಪರ ವಾದಿಸಿದ ವಕೀಲ ಪ್ರಶಾಂತ್ ಭೂಷಣ್, ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಸಂವಿಧಾನದ 25 ನೇ ವಿಧಿಯಡಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನನ್ನು ರಕ್ಷಿಸಲಾಗು



ವುದಿಲ್ಲ. ಉತ್ತರಾಧಿಕಾರವು ನಾಗರಿಕ ಹಕ್ಕು ಮತ್ತು ಅಗತ್ಯ ಧಾರ್ಮಿಕ ಆಚರಣೆ ಎಂದು ಪರಿಗಣಿಸಲಾಗದು. ಶಾಯರಾ ಬಾನೋ ತೀರ್ಪಿನ ನಂತರ ದೇಶದಲ್ಲಿ ಈಗ ಆ ಪರಿಸ್ಥಿತಿ ಹೊಂದಲು ಸಾಧ್ಯವಿಲ್ಲ. ಮುಸ್ಲಿಂ ಮಹಿಳೆಯರಿಗೆ ಮುಸ್ಲಿಂ ಪುರುಷರಿಗೆ ಇರುವಂತೆ ಸಮಾನವಾದ ಹಕ್ಕುಗಳು ಇರುವುದಿಲ್ಲ ಎಂದು ಹೇಳಿದರು.

ಆದಾಗ್ಯೂ, ಆದಿವಾಸಿಗಳು ಸೇರಿದಂತೆ ವಿವಿಧ ಸಮಾಜಗಳಲ್ಲಿ ಹಲವಾರು ಅಸಮತೋಲನಗಳಿವೆ ಎಂಬುದನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡಿತು. ಸುಪ್ರೀಂಕೋರ್ಟ್ ನಿಂದ ಇವುಗಳನ್ನು ತೆಗೆದುಹಾಕಬಹುದೇ? ಎಂದು ಅರ್ಜಿದಾರರನ್ನು ಪ್ರಶ್ನಿಸಿತು. ವಿಚಾರಣೆಯ ಸಂದರ್ಭದಲ್ಲಿ, 'ಒಬ್ಬ ಪುರುಷನಿಗೆ ಒಬ್ಬ ಹೆಂಡತಿ' ಎಂಬ ನಿಯಮವನ್ನು ಎಲ್ಲಾ ಸಮುದಾಯಗಳು ಏಕರೂಪವಾಗಿ ಅನುಸರಿಸುತ್ತಿಲ್ಲ ಎಂಬುದನ್ನು ನ್ಯಾಯಾಲಯ ಪರಿಗಣಿಸಿತು.

ಆದರೆ ಎಲ್ಲಾ ದ್ವಿಪತ್ನಿ ವಿವಾಹಗಳನ್ನು ಅಸಾಂವಿಧಾನಿಕವೆಂದು ನ್ಯಾಯಾಲಯ ಘೋಷಿಸಬಹುದೇ? ಎಂಬುದು ಇದರ ಅರ್ಥ ಅಲ್ಲ. ಆದ್ದರಿಂದ ನಿರ್ದೇಶನ ತತ್ವಗಳನ್ನು ಜಾರಿಗೆ ತರಲು ನಾವು ಶಾಸಕಾಂಗಕ್ಕೆ ಅಧಿಕಾರವನ್ನು ನೀಡಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರಲ್ಲದೆ, ಏಕರೂಪ ನಾಗರಿಕ ಸಂಹಿತೆ ಜಾರಿಗೆ ನ್ಯಾಯಾಲಯ ಈಗಾಗಲೇ ಶಾಸಕಾಂಗಕ್ಕೆ ಶಿಫಾರಸು ಮಾಡಿದೆ ಎಂದು ಅವರು ಹೇಳಿದರು.

ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗ ಮಧ್ಯಪ್ರವೇಶ ಮಾಡುವುದು ಸೂಕ್ತ ಎಂದು ಪೀಠ ಹೇಳಿತು. ಇದಕ್ಕೆ ಉತ್ತರಿಸಿದ ಭೂಷಣ್, ಅರ್ಜಿದಾರರಲ್ಲಿ ಕೆಲವರು ಮುಸ್ಲಿಂ ಮಹಿಳೆಯರಿದ್ದಾರೆ ಎಂದು ತಿಳಿಸಿದರು.

ವಾದಗಳನ್ನು ಆಲಿಸಿದ ನ್ಯಾಯಾಲಯವು, ಶರಿಯತ್ ಉತ್ತರಾಧಿಕಾರದ ನಿಬಂಧನೆಗಳನ್ನು ರದ್ದುಗೊಳಿಸಿದರೆ ಪರಿಹಾರಗಳೇನು ಎಂಬ ಸಲಹೆಗಳನ್ನು ಸೇರಿಸಲು ಅರ್ಜಿಯನ್ನು ತಿದ್ದುಪಡಿ ಮಾಡಲು ಸೂಚಿಸಿತು. ಭೂಷಣ್ ಅವರು ಅರ್ಜಿಯನ್ನು ತಿದ್ದುಪಡಿ ಮಾಡಲು ಒಪ್ಪಿದ ನಂತರ ಪೀಠವು ಮುಂದಿನ ವಿಚಾರಣೆಯನ್ನು ಮತ್ತೊಂದು ದಿನಾಂಕಕ್ಕೆ ಮುಂದೂಡಿತು.

### ಜೇಕಬ್ ಬೆಥೆಲ್‌ಗೆ ನಾಯಕತ್ವದ ಜವಾಬ್ದಾರಿ

• ಪ್ರಜೋದಯ ವರದಿ

**ಬೆಂಗಳೂರು:** ಇತ್ತೀಚೆಗೆ ಮುಕ್ತಾಯಗೊಂಡ ಟಿ-20 ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡದ ವಿರುದ್ಧ ಇಂಗ್ಲೆಂಡ್ ಸೋತರೂ, ಯುವ ಬ್ಯಾಟರ್ ಜೇಕಬ್ ಬೆಥೆಲ್ ಅವರು ಸ್ಫೋಟಕ ಬ್ಯಾಟಿಂಗ್ ಮೂಲಕ ಕ್ರಿಕೆಟ್ ಅಭಿಮಾನಿಗಳ ಗಮನ ಸೆಳೆದಿದ್ದರು.

ಐಪಿಎಲ್‌ನಲ್ಲಿ ಆರ್‌ಸಿಬಿ ತಂಡದ ಪರ ಆಡುವ ಜೇಕಬ್ ಬೆಥೆಲ್ ಅವರಿಗೆ ಪ್ರಮುಖ ಟೂರ್ನಿಯೊಂದರಲ್ಲಿ ತಂಡವನ್ನು ಮುನ್ನಡೆಸುವ ಜವಾಬ್ದಾರಿ ಒಲಿದು ಬಂದಿದೆ. ಮುಂಬರುವ ದಿ ಹಂಡ್ರೆಡ್ ಲೀಗ್‌ನಲ್ಲಿ ಬರ್ಮಿಂಗ್‌ಹ್ಯಾಮ್ ಫೀನಿಕ್ಸ್ ತಂಡವನ್ನು ಜೇಕಬ್ ಬೆಥೆಲ್ ಮುನ್ನಡೆಸಲಿದ್ದಾರೆ ಎಂದು ಫ್ರಾಂಚೈಸಿ ತಿಳಿಸಿದೆ.

21 ವರ್ಷದ ಬೆಥೆಲ್ ಐರ್ಲೆಂಡ್ ವಿರುದ್ಧದ ಟಿ-20 ಸರಣಿಯಲ್ಲಿ ಹ್ಯಾರಿ ಬ್ರೂಕ್ ಬದಲು ಇಂಗ್ಲೆಂಡ್ ತಂಡವನ್ನು ಮುನ್ನಡೆಸಿದ್ದರು. ಆ ಮೂಲಕ ಇಂಗ್ಲೆಂಡ್ ತಂಡದ ಅತ್ಯಂತ ಕಿರಿಯ ನಾಯಕ ಎಂಬ ಸಾಧನೆ ಮಾಡಿದ್ದರು.

# ಎಲ್‌ಪಿಜಿ ಗ್ರಾಹಕರಿಗೆ ಹೊಸ ಮಾರ್ಗಸೂಚಿ: ಮಹತ್ವದ ಬದಲಾವಣೆ

• ಪ್ರಜೋದಯ ವರದಿ

**ನವದೆಹಲಿ:** ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಕೃತಕ ಅಭಾವ ಮತ್ತು ಕಾಳಸಂತೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಈಗ ಕಠಿಣ ಕ್ರಮಗಳಿಗೆ ಮುಂದಾಗಿದೆ. ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಗ್ಯಾಸ್ ಸಿಲಿಂಡರ್‌ಗಳ ದಾಸ್ತಾನು ಮಾಡುವುದನ್ನು ತಡೆಯಲು, ಎರಡು ಬುಕ್ಕಿಂಗ್‌ಗಳ ನಡುವಿನ ಅವಧಿಯನ್ನು 21 ದಿನಗಳಿಂದ 25 ದಿನಗಳಿಗೆ ಹೆಚ್ಚಿಸಲಾಗಿದೆ.

ಈ ಹಿಂದೆ 55 ದಿನಗಳಿಗೊಮ್ಮೆ ಸಿಲಿಂಡರ್ ಬುಕ್ ಮಾಡುತ್ತಿದ್ದವರು, ಈಗ ಯುದ್ಧದ ಭೀತಿಯಿಂದ ಕೇವಲ 15 ದಿನಗಳಲ್ಲೇ ಬುಕ್ಕಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಇದನ್ನು ನಿಯಂತ್ರಿಸಲು ಹೊಸ ನಿಯಮ ಜಾರಿಗೆ ತರಲಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳಿಗಿಂತ ಮನೆ ಬಳಕೆಯ ಗ್ರಾಹಕರಿಗೆ ಮೊದಲ



ಆದ್ಯತೆ ನೀಡುವಂತೆ ಸರ್ಕಾರ ಸೂಚನೆ ನೀಡಿದೆ. ''ಮನೆ ಬಳಕೆಯ ಗ್ರಾಹಕರ ಹಿತವೇ ನಮಗೆ ಮುಖ್ಯ'' ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ದೇಶೀಯ ರಿಫೈನರಿಗಳಿಗೆ ಎಲ್‌ಪಿಜಿ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವಂತೆ ಸರ್ಕಾರ ಆದೇಶಿಸಿದೆ. ಗ್ಯಾಸ್ ಪೂರೈಕೆಯಲ್ಲಿ ಸ್ವಾವಲಂಬನೆ ಸಾಧಿಸಲು ಹೊಸ ದೇಶಗಳೊಂದಿಗೆ ಸರ್ಕಾರ ಮಾತುಕತೆ ನಡೆಸುತ್ತಿದೆ. ಅಲ್ಜೀರಿಯಾ, ಆಸ್ಟ್ರೇಲಿಯಾ, ಕೆನಡಾ ಮತ್ತು ನಾರ್ವೆ ದೇಶಗಳು ಭಾರತಕ್ಕೆ ಎಲ್‌ಪಿಜಿ ಮಾರಾಟ ಮಾಡಲು ಮುಂದೆ ಬಂದಿವೆ ಎಂದು ಮೂಲಗಳು ತಿಳಿಸಿವೆ.

# ಪೋಕ್ಸೋ ಕಾಯಿದೆ ಬಗ್ಗೆ ಜಾಗೃತಿ ಮೂಡಿಸಿ

• ಪ್ರಜೋದಯ ವರದಿ

**ಹಾಸನ:** ಪೋಕ್ಸೋ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗುತ್ತಿದ್ದು, ಅಧಿಕಾರಿಗಳು ಹೆಚ್ಚಿನ ಗಮನ ಹರಿಸಬೇಕು. ಶಾಲಾ- ಕಾಲೇಜುಗಳಲ್ಲಿ ಪೋಕ್ಸೋ ಕಾಯಿದೆಯ ಬಗ್ಗೆ ಜಾಗೃತಿ ಮೂಡಿಸುವಂತೆ ಪ್ರಧಾನ ಹಾಗೂ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಮಂಗಳವಾರ ಜಿಲ್ಲಾ ಮಟ್ಟದ ಪೋಕ್ಸೋ ಸಮಿತಿಯ ಸಭೆ ನಡೆಸಿ ಮಾತನಾಡಿದ ಅವರು, ಖಾಸಗಿ ಶಾಲೆಗಳಲ್ಲಿ ಹೆಚ್ಚಾಗಿ ಬಾಲ್ಯ ವಿವಾಹ ಮತ್ತು ಪೋಕ್ಸೋ ಪ್ರಕರಣಗಳು ಕಂಡುಬರುತ್ತಿವೆ. ಮಕ್ಕಳು ಪ್ರೌಢ



ವ್ಯವಸ್ಥೆ ತಲುಪುವ ಮೊದಲೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ಕ್ರಮಗಳು ಕೈಗೊಳ್ಳಬೇಕು ಎಂದು ತಿಳಿಸಿದರು.

ಪೋಕ್ಸೋ ಕಾಯಿದೆ ಅಡಿಯಲ್ಲಿ ಬರುವ ಕಾನೂನುಗಳ ಬಗ್ಗೆ, ಸಹಾಯವಾಣಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳ ಹೆಚ್ಚಾಗಿ ಆಯೋಜನೆ ಮಾಡಬೇಕು. ಪೋಕ್ಸೋ ಕಾಯಿದೆ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಮಾನಸಿಕ ಖಿನ್ನತೆ ಒಳಗಾದದಂತೆ ಎಚ್ಚರವಹಿಸಬೇಕು, ಪೊಲೀಸ್ ಅಧಿಕಾರಿಗಳು ಪೋಕ್ಸೋ ಕಾಯಿದೆಯಡಿ ದೂರು ಸಲ್ಲಿಕೆಯಾದರೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ರಕ್ಷಣೆಯನ್ನು ನೀಡಬೇಕು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಶಾಲಾ ಮಟ್ಟದಲ್ಲಿ ತೆರೆದ ಮನೆ ಕಾರ್ಯಕ್ರಮದ ಮೂಲಕ ಮಕ್ಕಳ ಹಕ್ಕುಗಳು, ಪೋಕ್ಸೋ ಕಾಯ್ದೆ ಕುರಿತು ಕಾರ್ಯಕ್ರಮಗಳು ನಡೆಸುವಂತೆ ಸೂಚಿಸಿದರಲ್ಲದೆ, ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲಾ ಕಾಲೇಜುಗಳಲ್ಲಿ 9 ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಪೋಕ್ಸೋ ಕಾಯ್ದೆ ಕುರಿತು ಅರಿವು ಮೂಡಿಸುವಂತೆ ತಿಳಿಸಿದರು.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ಪೋಕ್ಸೋ ಕಾಯ್ದೆಯ ಯು/ಎಸ್ 39 ರಡಿಯಲ್ಲಿ ಸಂತ್ರಸ್ಥ, ಮಗುವಿಗೆ ಕಾನೂನು ಸಹಾಯಕ್ಕಾಗಿ ಅಗತ್ಯವಿದ್ದರೆ ಬೆಂಬಲ ವ್ಯಕ್ತಿಯನ್ನು ನೇಮಿಸಲು ಸೂಚಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ., ಹಿರಿಯ ಸಿವಿಲ್ ನ್ಯಾಯಾಧೀಶರು ಗಿರೀಗೌಡ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ಇದ್ದರು.

# ಭಾರತೀಯ ಕಿಸಾನ್ ಸಂಘಕ್ಕೆ ಲಕ್ಷ ಸಮಿತಿ ರಚನೆಗೆ ನಿರ್ಧಾರ

• ಪ್ರಜೋದಯ ವರದಿ

**ಅರಕಲಗೂಡು:** ರೈತರನ್ನು ಸಂಘಟಿಸಿ ಅವರ ಹಿತ ಕಾಯುವ ಸಲುವಾಗಿ ಭಾರತೀಯ ಕಿಸಾನ್ ಸಂಘ ಗ್ರಾಮ ಮಟ್ಟದಲ್ಲಿ ಹೊಸದಾಗಿ ಒಂದು ಲಕ್ಷ ಸಮಿತಿಗಳನ್ನು ರಚಿಸುವ ಉದ್ದೇಶ ಹೊಂದಿದೆ ಎಂದು ಸಂಘದ ರಾಜ್ಯ ಪದಾಧಿಕಾರಿ ಯೋಗೇಂದ್ರ, ಅವರು ತಿಳಿಸಿದರು.

## ರೈತರನ್ನು ಸಂಘಟಿಸಿ ಅವರ ಹಿತ ಕಾಯುವ ಉದ್ದೇಶ

ಕಳೆದ 2024ರಿಂದ 27ವರೆಗೆ ಮೂರು ವರ್ಷದ ಅವಧಿಗೆ 80 ಲಕ್ಷ ರೈತರ ಸದಸ್ಯತ್ವ ಹೊಂದಿರುವ ದೊಡ್ಡ ಸಂಘಟನೆಯಾಗಿದೆ. ರಾಷ್ಟ್ರೀಯ, ರಾಜ್ಯ, ಪ್ರಾಂತೀಯ, ಜಿಲ್ಲೆ ಮತ್ತು ತಾಲ್ಲೂಕು ಸಮಿತಿಗಳನ್ನು ಒಳಗೊಂಡಿದೆ. ತಾಲ್ಲೂಕಿನಲ್ಲಿ ಹೊಸದಾಗಿ ಸಮಿತಿ ರಚಿಸಿದ್ದು ಗೌರವಾಧ್ಯಕ್ಷರಾಗಿ ಎಸ್.ವಿ.ಯೋಗಣ್ಣ, ಅಧ್ಯಕ್ಷರಾಗಿ ಬಿ.ಸಿ. ರವಿ, ಕಾಯಾಧ್ಯಕ್ಷ ಮಲ್ಲಪ್ಪನಹಳ್ಳಿ



ವೀರೇಂದ್ರ, ಉಪಾಧ್ಯಕ್ಷರಾಗಿ ಹಾನಗಲ್ ಜಗನ್ನಾಥ್, ಕಾಯದರ್ಶಿಯಾಗಿ ಸೌಭಾಗ್ಯ ಅವರನ್ನು ನೇಮಕ ಮಾಡಲಾಗಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಇಲ್ಲದೆ ಕೃಷಿಯಿಂದ ಹಿಂದೆ ಸರಿಯುವ ಸ್ಥಿತಿ ಬಂದೊದಗಿದೆ. ಕನಿಷ್ಠ ಬೆಂಬಲ ಬೆಲೆ ಸ್ಥಾನದಲ್ಲಿ ವೈಜ್ಞಾನಿಕವಾಗಿ ರೈತರ ಬೆಳೆಗೆ ಲಾಭದಾಯಕ ದರ ನಿಗದಿ ಪಡಿಸಬೇಕು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ತುರ್ತು ಕ್ರಮ ವಹಿಸಬೇಕು. ಹಳ್ಳಿಗಳಲ್ಲಿ ಮೂಲ ಸೌಕರ್ಯ ಒದಗಿಸುವುದರ ಜತೆಗೆ ಮಧ್ಯವರ್ತಿಗಳ ಹಾವಳಿ ತಪ್ಪಿಸಿ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು.

ಸಮಿತಿಯ ಗೌರವಾಧ್ಯಕ್ಷ ಎಸ್.ವಿ. ಯೋಗಣ್ಣ ಅವರು ಮಾತನಾಡಿ, ರೈತ ಸಂಘಟನೆಗಳು ಹಲವಾರು ಬಣಗಳಾಗಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ಕೆಲವು ಕಡೆ ಅಧಿಕಾರಿಗಳಿಗೆ ಇರಿಸು ಮುರಿಸು ಉಂಟಾಗುತ್ತಿದೆ. ಈ ಬಗ್ಗೆ ಕಾರ್ಯಾಂಗ ಎಚ್ಚೆತ್ತುಕೊಳ್ಳಬೇಕು. ಸಾಮೂಹಿಕ ನಾಯಕತ್ವದ ಹೆಸರಿನಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ ಎಂದರು.

ಸಂಘದ ಮಂಜೇಗೌಡ, ಜಗನ್ನಾಥ್, ಸೌಭಾಗ್ಯ, ಮಲ್ಲಿಪಟ್ಟಣ ಹೋಬಳಿ ಘಟಕದ ಅಧ್ಯಕ್ಷ ಎಚ್.ಎಸ್. ಸಂಜು, ಕಾರ್ಯಾಧ್ಯಕ್ಷ ದಶರಥ, ಕೊಣನೂರು ಹೋಬಳಿ ಘಟಕದ ಉಪಾಧ್ಯಕ್ಷ ಪ್ರದೀಪ್ ಗೋಷ್ಠಿಯಲ್ಲಿದ್ದರು.

# ಡಾ.ಯತೀಶ್‌ಗೆ ಯುಪಿಎಸ್ಸಿಯಲ್ಲಿ 732ನೇ ರ್‍ಯಾಂಕ್

• ಪ್ರಜೋದಯ ವರದಿ

**ಬೇಲೂರು:** ಪೂರ್ಣಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದ ವಿದ್ಯಾರ್ಥಿ ಡಾ. ಎಂ.ಎ. ಯತೀಶ್ ಯುಪಿಎಸ್ ಸಿ ಯಲ್ಲಿ 732 ರ್‍ಯಾಂಕ್ ಗಳಿಸಿದ್ದು ಶಾಲೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಪ್ರಾಂಶುಪಾಲ ಎನ್.ಪ್ರಶಾಂತ್ ಕುಮಾರ್ ಮಾತನಾಡಿ, ಡಾ.ಯತೀಶ್ ಅವರು ನಮ್ಮ ಶಾಲೆಯ ವಿದ್ಯಾರ್ಥಿಯಾಗಿದ್ದು ಚಿಕ್ಕಂದಿನಿಂದಲೇ ಪಾಠದ ಜೊತೆಗೆ ಆಟದಲ್ಲೂ ಮುಂದಿದ್ದರು. ಹತ್ತನೇ ತರಗತಿಯಲ್ಲಿ ಕಬಡ್ಡಿ ಪಂದ್ಯಾವಳಿಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದರು. ನಂತರ ಎಂಬಿಬಿಎಸ್‌ನಲ್ಲಿ ಚಿನ್ನದ ಪದಕ ಪಡೆದು ಈಗ ದೇಶದಲ್ಲೇ ಯುಪಿಎಸ್ಸಿಯಲ್ಲಿ 732 ರ್‍ಯಾಂಕ್ ಗಳಿಸಿ ಜಿಲ್ಲೆ ತಾಲೂಕು ಹಾಗೂ ನಮ್ಮ ಶಾಲೆಗೆ ಕೀರ್ತಿಯನ್ನು ತಂದಿದ್ದು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಉನ್ನತ ಸ್ಥಾನ ಗಳಿಸಿ ದೇಶದ



ಅಭಿವೃದ್ಧಿಗೆ ಸಮಾಜದ ಒಳಿತಿಗೆ ಶ್ರಮಿಸಲಿ ಎಂದು ಹಾರೈಸಿದರು.

ಕಾರ್ಯದರ್ಶಿ ಮುರುಳಿಧರ್ ಮಾತನಾಡಿ ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ತಮ್ಮ ಬಾಲ್ಯ ದಿನದಿಂದಲೇ ಕಲಿಕೆಯಲ್ಲಿ ಮುಂದಿದ್ದು ಅಗಾಧವಾಗಿ ಗ್ರಹಿಸುವ ಶಕ್ತಿಯನ್ನು ಹೊಂದಿದ್ದರು. ಅವರ ನಯ ವಿನಯ ಹಾಗೂ ಗುರುಗಳ ಮೇಲಿಟ್ಟಿರುವ ಪ್ರೀತಿ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ ಎಂದರು

ಡಾ ಯತೀಶ್ ಮಾತನಾಡಿ, ತಮ್ಮ ಓದಿನ ಆರಂಭ ದಿನದಲ್ಲಿ ಪೂರ್ಣಪ್ರಜ್ಞ ಶಾಲೆಯ ಶಿಕ್ಷಕರು ಉತ್ತಮ ಮಾರ್ಗದರ್ಶನ ಹಾಗೂ ಶಿಕ್ಷಣವನ್ನು ನೀಡಿ ಗಟ್ಟುಮುಟ್ಟಾದ ಅಡಿಪಾಯ ಹಾಕಿದರು. ನಂತರ ಎಂಬಿಬಿಎಸ್ ಪರೀಕ್ಷೆಯಲ್ಲಿ ಗೋಲ್ಡ್ ಮೆಡಲ್ ಪಡೆದೆ. ಅವಿರತ ಶ್ರಮದಿಂದಾಗಿ ತಮಗೆ ಯುಪಿಎಸ್ಸಿಯಲ್ಲಿ 732 ರ್‍ಯಾಂಕ್ ದೊರಕಿದೆ. ತಮಗೆ ಯಾವುದೇ ಕ್ಷೇತ್ರದಲ್ಲಿ ಕೆಲಸ ದೊರೆತರೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತೇನೆ. ಬಹುತೇಕ ಐಪಿಎಸ್ ಸಿಕ್ಕಿದಲ್ಲಿ ಉತ್ತಮ ಜನಸೇವೆ ಮಾಡಲು ಸಿದ್ಧನಿದ್ದೇನೆ ಎಂದು ತಮ್ಮ ಕನಸನ್ನು ಹಂಚಿಕೊಂಡರು.

ಪ್ರೈಮರಿ ಶಾಲೆಯ ಪ್ರಾಂಶುಪಾಲೆ ಶ್ರೀನಿಧಿ, ಕಾರ್ಯದರ್ಶಿ ಅನಂತ ರಾಮು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ರಸ್ತೆ ಸುರಕ್ಷತೆಯು ಪ್ರತಿಯೊಬ್ಬ ನಾಗರೀಕನ ಜವಾಬ್ದಾರಿ

• ಪ್ರಜೋದಯ ವರದಿ

**ಆಲೂರು:** ರಸ್ತೆ ಸುರಕ್ಷತೆಯು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಸಂಚಾರ ನಿಯಮಗಳನ್ನು ಪಾಲಿಸುವುದು ಜೀವಗಳನ್ನು ಉಳಿಸಲು ಅತ್ಯಗತ್ಯ ಎಂದು ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ ಅವರು ಅಭಿಪ್ರಾಯಪಟ್ಟರು.

ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ರಸ್ತೆ ಸಪ್ತಾಹ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಬಾಲ್ಯದಿಂದಲೇ ರಸ್ತೆ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಔಚಿತ್ಯಪೂರ್ಣವಾದುದು. ಈ ನಿಟ್ಟಿನಲ್ಲಿ ಆಲೂರು ತಾಲ್ಲೂಕು ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಉತ್ತಮೋತ್ತಮ



ಕಾರ್ಯಕ್ರಮಗಳನ್ನು ಸಂಘಟಿಸುತ್ತಿದೆ. ಪ್ರತಿಯೊಬ್ಬರೂ ಸಂಚಾರಿ ನಿಯಮಗಳಾದ ವೇಗದ ಮಿತಿ, ಹೆಲ್ಮೆಟ್, ಸೀಟ್ ಬೆಲ್ಟ್ ಬಳಕೆ, ಸಂಚಾರ ಚಿಹ್ನೆಗಳನ್ನು ಗೌರವಿಸುವ ಮೂಲಕ ಅಪಘಾತಗಳನ್ನು ತಡೆಯಬಹುದಾಗಿದೆ. ಕುಡಿದು ವಾಹನ ಚಾಲನೆ ಮಾಡುವುದು, ಚಾಲನೆಯಲ್ಲಿದ್ದಾಗ ಮೊಬೈಲ್ ಬಳಕೆ ಮಾಡುವುದು ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡುವುದು ತುಂಬಾ ಅಪಾಯಕಾರಿ ಹಾಗೂ ಕಾನೂನು ಬಾಹಿರವಾಗಿದೆ. ಆಧುನಿಕ ಜಗತ್ತಿನಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿರುವಂತೆಯೇ, ರಸ್ತೆ ಅಪಘಾತಗಳ ಸಂಖ್ಯೆಯೂ ಹೆಚ್ಚಾಗುತ್ತಿರುವುದು ಶೋಚನೀಯ ಸಂಗತಿಯಾಗಿದೆ ಎಂದರು.

ಎಸ್.ವಿ.ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಎಸ್.ಎನ್.ನಳಿನಾ ಗಿರೀಶ್ ಮಾತನಾಡಿ, ರಸ್ತೆ ಸುರಕ್ಷತೆ ಎಂದರೆ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಚಾಲಕರು, ಪಾದಚಾರಿಗಳು ಮತ್ತು ಪ್ರಯಾಣಿಕರನ್ನು ರಸ್ತೆ ಅಪಘಾತಗಳಿಂದ ರಕ್ಷಿಸುವ ಕ್ರಮಗಳಾಗಿವೆ. ಪ್ರತಿಯೊಬ್ಬರೂ ಇವುಗಳನ್ನು ಪಾಲಿಸಿದಾಗ ಮಾತ್ರ ಸಮಾಜ ಸ್ವಾಸ್ಥ್ಯವಾಗಿರಲು ಸಾಧ್ಯ ಎಂದರು.

ಜಿಲ್ಲಾ ಸಹಾಯಕ ಆಯುಕ್ತ ಎಂ.ಬಾಲಕೃಷ್ಣ, ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್, ತಾಲ್ಲೂಕು ಖಜಾಂಚಿ ಬಿ.ಎಸ್.ಹಿಮ, ತಾಲ್ಲೂಕು ಸಹ ಕಾರ್ಯದರ್ಶಿ ಎಚ್.ಡಿ.ಕುಮಾರ್, ಫ್ಲಾಕ್ ಲೀಡರ್ ಎಂ.ಎಲ್.ಎಲಿಜಬೆತ್, ಬೈರಾಪುರ ಶಾಲೆಯ ಮುಖ್ಯ ಶಿಕ್ಷಕ ಶಂಕರಶೆಟ್ಟಿ, ಎಚ್.ಸಿ.ಜ್ಯೋತಿ ಅಮೃತೇಶ್, ಎಸ್.ವಿ.ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ಎಂ.ಎನ್.ಸುನಿಲ್ ಮುಂತಾದವರು ಮಾತನಾಡಿದರು. ಜಾಥಾದಲ್ಲಿ ಎಸ್.ವಿ. ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ರೋಸ್ ಮೇರಿ, ನವ್ಯಶ್ರೀ, ಗೈಡ್ ಕ್ಯಾಪ್ಟನ್ ಸುಮಿತ್ರ, ಸ್ಕೌಟ್ ಮಾಸ್ಟರ್ ದೇವರಾಜ್, ಸತೀಶ್; ಬೆಥಸ್ದ ಆಂಗ್ಲ ಮಾಧ್ಯಮ ಶಾಲೆಯ ಗೈಡ್ ಕ್ಯಾಪ್ಟನ್ಸ್ ಶಿಲ್ಪಾಕೃತಿ, ಎಂ. ಚಂದ್ರಕಲಾ, ಸೌಮ್ಯ ಎಚ್.ಎನ್; ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ಕಾವ್ಯ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೈರಾಪುರ ಗೈಡ್ ಕ್ಯಾಪ್ಟನ್ ಅಶ್ವಿನಿ, ಆಲೂರು ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯ ಕಬ್ ಮಾಸ್ಟರ್ ಕೆ.ಜೆ.ರಾಮಚಂದ್ರು, ಗೈಡ್ ಕ್ಯಾಪ್ಟನ್ ರೋಹಿಣಿ ಬಿ.ಎಂ, ಲೇಡಿ ಸ್ಕೌಟ್ ಮಾಸ್ಟರ್ ಕೆ.ಎ. ಶಕುಂತಲಾ, ಬೈರಾಪುರ ಶಾಲೆಯ ಸಹ ಶಿಕ್ಷಕರಾದ ಜ್ಯೋತಿ ಅಮೃತೇಶ್, ನಾಗರತ್ನ, ಅಂಬಿಕಾ, ಅತಿಥಿ ಶಿಕ್ಷಕಿ ಕಾವ್ಯ ಸೇರಿ ಇತರರು ಉಪಸ್ಥಿತರಿದ್ದರು.

# ಮಹಿಳೆಯರ ಸಬಲೀಕರಣ ನಿರೀಕ್ಷಿತ ಮಟ್ಟದಲ್ಲಿಲ್ಲ: ವಿಷಾದ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 70ರ ಗಡಿ ದಾಟಿದ್ದರೂ, ಸಬಲೀಕರಣ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲದಿರುವುದು ಆತಂಕಕಾರಿ ಎಂದು ನಾಗೇಶ್ ಶಿಕ್ಷಣ ಸಂಸ್ಥೆಯ ಸಿಇಒ ಡಾ. ಭಾರತಿ ನಾಗೇಶ್ ಅವರು ವಿಷಾದಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪದವಿ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಅಂತರಾಷ್ಟ್ರೀಯ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ಬದಲಾಗದ ಪರಿಸ್ಥಿತಿ:** ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಶೇ. 9ರಷ್ಟಿದ್ದ ಮಹಿಳಾ ಸಾಕ್ಷರತೆ ಇಂದು ಶೇ.70ಕ್ಕೆ ಏರಿದೆ. ಸರ್ಕಾರ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದರೂ ಲಕ್ಷಾಂತರ ಹೆಣ್ಣುಮಕ್ಕಳಿಗೆ ಇಂದಿಗೂ ಶಾಲೆಯ ಬಾಗಿಲು ತೆರೆದಿಲ್ಲ.

## ಕೆಲಸ ಮಾಡುವ ಸ್ಥಳಗಳಲ್ಲಿ ಕಾಡುತ್ತಿದೆ ತಾರತಮ್ಯ - ಅಭದ್ರತೆ



ಮಹಿಳೆಯರ ಮೇಲೆ ದೌರ್ಜನ್ಯ, ಭ್ರೂಣ ಹತ್ಯೆ ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಸಾಗಾಟದಂತಹ ಕೃತ್ಯಗಳು ಅವಿಶ್ರಾಂತವಾಗಿ ನಡೆಯುತ್ತಲೇ ಇವೆ. ಕೆಲಸ ಮಾಡುವ ಸ್ಥಳಗಳಲ್ಲಿ ತಾರತಮ್ಯ ಮತ್ತು ಅಭದ್ರತೆ ಮಹಿಳೆಯನ್ನು ಕಾಡುತ್ತಿದೆ. ಮಧ್ಯರಾತ್ರಿಯಲ್ಲಿ ಮಹಿಳೆ ನಿರ್ಭೀತಿಯಿಂದ ಓಡಾಡಬೇಕೆಂಬ ಗಾಂಧೀಜಿಯವರ ಕನಸು ಇಂದಿಗೂ ನನಸಾಗಿಲ್ಲ ಎಂದು ವಿಷಾದಿಸಿದರು.

**ಜಾಲತಾಣಗಳ ಅತಿಯಾದ ಬಳಕೆ:** ಇಂದಿನ ಮಕ್ಕಳಲ್ಲಿ ಮಾನಸಿಕ ಸ್ಥೈರ್ಯ ಕುಗ್ಗುತ್ತಿದೆ. ಜಂಕ್ ಫುಡ್ ಬಳಕೆ ಹಾಗೂ ಸಾಮಾಜಿಕ ಜಾಲತಾಣಗಳ ಅತಿಯಾದ ವ್ಯಾಮೋಹ ಇದಕ್ಕೆ ಕಾರಣವಿರಬಹುದು. ಮುಂದಿನ 20 ವರ್ಷಗಳಲ್ಲಿ ಮಾನವ ಶಕ್ತಿಯ ಬದಲು ರೋಬೋಟ್‌ಗಳ ಬಳಕೆ ಹೆಚ್ಚಾಗುವ ಭೀತಿ ಇದೆ. ಜಾಲತಾಣಗಳಲ್ಲಿ ಅಶ್ಲೀಲತೆ ಮತ್ತು ದೌರ್ಜನ್ಯದ ವಿಚಾರಗಳ ಪ್ರಸಾರಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ಹೆಣ್ಣುಮಕ್ಕಳು ನೈತಿಕತೆ ಮತ್ತು ವ್ಯಕ್ತಿತ್ವವನ್ನು ಹಾಳುಮಾಡಿಕೊಳ್ಳದೆ ಛಲದಿಂದ ಸಾಧನೆ ಮಾಡಬೇಕು ಎಂದು ಹೇಳಿದರು.

**ಸಾಧಕಿಯರು ಪ್ರೇರಣೆಯಾಗಲಿ:** ಪ್ರಾಂಶುಪಾಲ ಡಾ. ಎಂ.ಕೆ. ಮಂಜುನಾಥ್ ಮಾತನಾಡಿ, ಮಹಿಳಾ ಶಕ್ತಿಯೇ ಸಮಾಜದ ಶಕ್ತಿಯಾಗಿದೆ. ಸಾಲುಮರದ ತಿಮ್ಮಕ್ಕ, ಸುಧಾ ಮೂರ್ತಿಯವರಂತಹ ಸಾಧಕಿಯರನ್ನು ಮಾದರಿಯಾಗಿರಿಸಿಕೊಂಡು ವಿದ್ಯಾರ್ಥಿನಿಯರು ಸಿಗುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಹ ಪ್ರಾಧ್ಯಾಪಕರಾದ ಡಾ. ಪ್ರವೀಣ್ ಕುಮಾರ್, ಡಾ.ನಿರೂಪಮ, ಗ್ರಂಥಪಾಲಕಿ ಕವಿತಾ ಎಸ್.ಎಂ., ಪ್ರಜ್ವಲ್ ಇದ್ದರು.

### ಯುದ್ಧ ಶೀಘ್ರವೇ ಕೊನೆಗೊಳ್ಳುತ್ತದೆ

• ಪ್ರಜೋದಯ ವರದಿ

**ಅಮೇರಿಕ:** ಇರಾನ್ ಯುದ್ಧ ಶೀಘ್ರ ಕೊನೆಗೊಳ್ಳಲಿದೆ ಎಂದು ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿಕೆ ನೀಡಿದ್ದಾರೆ.

ಫ್ಲೋರಿಡಾದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಟೆಹ್ರಾನ್ ಯಾವುದೇ ಚಾಲಕಿತನ ಮಾಡಬಾರದು, ಇದಕ್ಕೆ ಪ್ರಯತ್ನಿಸಿದರೆ ಅಮೆರಿಕ ಇರಾನ್ ದೇಶವನ್ನೇ ಮುಗಿಸಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ ಇರಾನ್ ಯುದ್ಧ ಅಲ್ಪ ಅವಧಿಯ ವಿಹಾರ ಎಂದು ಕರೆದಿದ್ದಾರೆ.

ಅಮೆರಿಕ ದಾಳಿ ಮಾಡಿ, ಇರಾನ್‌ನ ನೌಕಾನೆಲೆ, ವಾಯುನೆಲೆ ಧ್ವಂಸಮಾಡಿ, ಸಂಪರ್ಕ ಕಡಿತಗೊಳಿಸಿದೆ, ಈಗ ಕೆಲವೇ ಅಸ್ತ್ರಗಳು ಇರಾನ್ ಬಳಿ ಉಳಿದಿವೆ, ಒಂದು ವೇಳೆ ಅಮೆರಿಕ ಇದನ್ನು ಆರಂಭಿಸಿರದಿದ್ದರೆ, ಇರಾನೇ ಅಮೆರಿಕ - ಇಸ್ರೇಲ್ ಮೇಲೆ ದಾಳಿ ಮಾಡುತ್ತಿತ್ತು ಎಂದು ಟ್ರಂಪ್ ಹೇಳಿದ್ದಾರೆ.

# ಆಲೂರು ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಕೊರತೆ

• ಪ್ರಜೋದಯ ವರದಿ

**ಆಲೂರು:** ವೈದ್ಯರ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾ.11 ಬುಧವಾರದಿಂದ ಐದು ದಿನ ಹೊರ ರೋಗಿಗಳ ಚಿಕಿತ್ಸಾ ಘಟಕವನ್ನು ಬಂದ್ ಮಾಡಿ, ಕಪ್ಪು ಪಟ್ಟಿ ಧರಿಸಿ ತುರ್ತು ಚಿಕಿತ್ಸಾ ಪ್ರಕರಣಗಳನ್ನು ಮಾತ್ರ ಉಪಚರಿಸಲಾಗುವುದು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ತಾಲ್ಲೂಕು ಆಸ್ಪತ್ರೆಗೆ ಪ್ರತಿದಿನ ನೂರಾರು ರೋಗಿಗಳು ಎಡತಾಕುತ್ತಾರೆ. ರೋಗಿಗಳಿಗೆ ಉಪಚರಿಸುವಷ್ಟು ಅಗತ್ಯ ಔಷಧಿ ಸರ್ಕಾರದಿಂದ ದೊರಕದೆ ದಾಸ್ತಾನಿಲ್ಲದೆ ತೊಂದರೆಯಾಗಿದೆ. ಇತ್ತೀಚೆಗೆ ಸರ್ಕಾರದಿಂದ ಅಗತ್ಯಕ್ಕೆ ತಕ್ಕಂತೆ ಔಷಧಿ ಕೊಡುತ್ತಿಲ್ಲ.

ಸಿ ಆಂಡ್ ಆರ್ ನಿಯಮವನ್ನು ಸರ್ಕಾರ ಉಲ್ಲಂಘನೆ ಮಾಡಿದೆ. ಹಲವು ತಿಂಗಳಿನಿಂದ



ಸರಿಯಾಗಿ ಸಂಬಳವಾಗುತ್ತಿಲ್ಲ. ಎ.ಬಿ. ಆರ್.ಕೆ. ನಿಯಮ ಪಾಲಿಸಲು ಸೂಚಿಸಿದ್ದಾರೆ. ಈ ನಿಯಮವನ್ನು ಪಾಲಿಸಿ ಔಷಧಿ ಕೊಳ್ಳಲು ತುಂಬಾ ಕಷ್ಟಸಾಧ್ಯವಾಗುತ್ತದೆ. ಸರ್ಕಾರದಿಂದ ಅನುದಾನದ ಹಣ ಬರುತ್ತಿಲ್ಲ ಎಂದರು.

ಎ.ಬಿ.ಆರ್.ಕೆ. ನಿಯಮದಂತೆ ಸಿಗುವ ಅಲ್ಪ ಹಣದಲ್ಲಿ ಔಷಧಿ ಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಉಳಿದಂತೆ ವಿದ್ಯುತ್, ನೀರು ಇತರೆ ತೊಂದರೆಗಳನ್ನು ನಿವಾರಿಸಲು ಸಾಧ್ಯವಾಗುತ್ತಿಲ್ಲ. ಆಸ್ಪತ್ರೆ ಶುಚಿತ್ವ ಕಾಪಾಡಲು ಸಹ ತೊಂದರೆಯಾಗಿದೆ ಎಂದು ತಿಳಿಸಿದರು.

ಸರ್ಕಾರ ಕೂಡಲೆ ಪ್ರತಿಕ್ರಿಯಿಸದಿದ್ದರೆ ಮಾ. 16 ರಿಂದ ಸಂಪೂರ್ಣ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಹೇಳಿದರು.

# ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದವನ ಕುಟುಂಬಕ್ಕೆ ಸಾಂತ್ವನ ಹೇಳಿದ ಹೆಚ್‌ಕೆಕೆ ಪತ್ನಿ

• ಪ್ರಜೋದಯ ವರದಿ

**ಸಕಲೇಶಪುರ:** ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಓಂನಗರ ಗ್ರಾಮದಲ್ಲಿ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ ಕುಟುಂಬಕ್ಕೆ ಮಾಜಿ ಶಾಸಕರಾದ ಎಚ್.ಕೆ.ಕುಮಾರಸ್ವಾಮಿ ಅವರ ಧರ್ಮಪತ್ನಿ ಚಂಚಲ ಕುಮಾರಸ್ವಾಮಿ ಅವರು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರಲ್ಲದೆ, ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಮೃತರ ಮನೆಗೆ ವಿದ್ಯುತ್ ಸಂಪರ್ಕ ಇಲ್ಲ ಎಂಬ ವಿಷಯ ಬೆಳಕಿಗೆ ಬಂದಿದೆ. ಆ ಮನೆಯಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿನಿ ದೀಪದ ಬೆಳಕಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದನ್ನು ಗ್ರಾಮಸ್ಥರು ಚಂಚಲ ಕುಮಾರಸ್ವಾಮಿ ಅವರ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಕುಟುಂಬದ ಸಂಕಷ್ಟಕರ ಪರಿಸ್ಥಿತಿಯನ್ನು ಅರಿತು ಬೇಸರ ವ್ಯಕ್ತಪಡಿಸಿದ ಅವರು, ತಮ್ಮ ಸ್ವಂತ ಖರ್ಚಿನಲ್ಲಿ ಆ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಭರವಸೆ ನೀಡಿ ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿ ತೆರಳಿದ್ದರು.

ನುಡಿದಂತೆ ಮರುದಿನ ಬೆಳಗ್ಗೆ ಸ್ವತಃ ಇಂಜಿನಿಯರ್ ಅವರಿಗೆ ಕರೆ ಮಾಡಿ ವಿದ್ಯುತ್ ಸಂಪರ್ಕ ವ್ಯವಸ್ಥೆ ಮಾಡಲು ಸೂಚಿಸಿದರು. ಅದರಂತೆ ಗ್ರಾಮದ ಮುಖಂಡರು ಹಾಗೂ ಯುವಕರು ಇಂಜಿನಿಯರ್ ಅವರ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿದ್ದು, ಶೀಘ್ರದಲ್ಲೇ ವಿದ್ಯುತ್ ಸಂಪರ್ಕ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾಭ್ಯಾಸಕ್ಕಾಗಿ ಆ ಮುಗ್ಧ ವಿದ್ಯಾರ್ಥಿನಿಗೆ ವಿದ್ಯುತ್ ಬೆಳಕಿನ ವ್ಯವಸ್ಥೆ ಕಲ್ಪಿಸಲು ಮುಂದಾದ ಮಾಜಿ ಶಾಸಕರಾದ ಎಚ್.ಕೆ. ಕುಮಾರಸ್ವಾಮಿ ಹಾಗೂ ಚಂಚಲ ಕುಮಾರಸ್ವಾಮಿ ಮತ್ತು ಗ್ರಾಮ ಪಂಚಾಯಿತಿ ಸದಸ್ಯರಾದ ರತ್ನಶಿವಣ್ಣ ಹಾಗೂ ರೋಹಿತ್ ಅವರಿಗೆ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

## ಜಿಲ್ಲಾ ನ್ಯಾಯಾಲಯದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ

# ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಉಚಿತ ಶಿಬಿರಗಳು ನಿರ್ಣಾಯಕ

• ಪ್ರಜೋದಯ ವರದಿ

**ಹಾಸನ:** ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಸಮಾಜದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಕೀಲರು ಹಾಗೂ ಸಾರ್ವಜನಿಕರಿಗಾಗಿ ಈ ರೀತಿಯ ಶಿಬಿರಗಳನ್ನು ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದ್ದು, ಸಮಾಜದ ಎಲ್ಲಾ ವರ್ಗಗಳ ಸಹಕಾರದಿಂದ ಇಂತಹ ಸೇವಾ ಕಾರ್ಯಕ್ರಮಗಳು ಮುಂದುವರಿಯಬೇಕು ಎಂದು ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅವರು ತಿಳಿಸಿದರು.

ಜಿಲ್ಲಾ ವಕೀಲರ ಸಂಘ ಹಾಸನ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ



ಹಾಗೂ ಹಾಸನಾಂಬ ಲಯನ್ಸ್ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ ಹಾಸನ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಶಿಬಿರಗಳಿಂದ ಎಲ್ಲಾ ವಯೋಮಾನದವರಿಗೆ ಸಾಕಷ್ಟು ಪ್ರಯೋಜನವಾಗಲಿದ್ದು, ರಕ್ತದಾನ ಮಾಡುವುದರಿಂದ ಇನ್ನೊಬ್ಬರ ಜೀವನ ಉಳಿಸಬಹುದಲ್ಲದೆ, ತಮ್ಮ ಆರೋಗ್ಯವೂ ಸುಧಾರಣೆಯಾಗುತ್ತದೆ ಎಂದು ಅವರು ಕಿವಿಮಾತು ಹೇಳಿದರು.

2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಿದಾಯತ್ ಉಲ್ಲಾ ಶರೀಫ್ ಅವರು ಮಾತನಾಡಿ, ಆರೋಗ್ಯವೇ ನಿಜವಾದ ಶ್ರೀಮಂತಿಕೆ ಎಂದು ತಿಳಿಸಿ, ಪ್ರತಿಯೊಬ್ಬರೂ ದಿನ ನಿತ್ಯ ಕನಿಷ್ಠ 45 ನಿಮಿಷ ನಡೆಯುವುದರಿಂದ ಆರೋಗ್ಯ ಸುಧಾರಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ಸಭಾಪತಿಗಳಾದ ಹೆಮ್ಮಿಗೆ ಮೋಹನ್ ಎಲ್ಲರೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಮಾನವೀಯ ಸೇವೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕಾರ್ಲೆ ಮೊಗಣ್ಣಗೌಡ ಅವರು ಮಾತನಾಡಿ, ಇಂತಹ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರಗಳು ಸಮಾಜದ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಎಲ್ಲರೂ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಅನಿಲ್‌ಕುಮಾರ್, ಡಾ.ಶೃತಿ, ಜಿ.ಕೆ.ದ್ರಾಕ್ಷಾಯಿಣಿ, ಡಾ. ತೇಜಸ್ವಿ ಹೆಚ್.ಜೆ., ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಹಿರಿಯ ಹಾಗೂ ಕಿರಿಯ ನ್ಯಾಯಾಧೀಶರುಗಳು ಮತ್ತು ಸಿವಿಲ್ ನ್ಯಾಯಾಧೀಶರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಶಿಬಿರದಲ್ಲಿ ಎಲ್ಲಾ ರೀತಿಯ ವಿವಿಧ ಆರೋಗ್ಯ ಸಮಸ್ಯೆಗಳ ತಪಾಸಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಒಟ್ಟು 300ಕ್ಕೂ ಅಧಿಕ ಜನರು ಭಾಗವಹಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಇದೇ ವೇಳೆ ನಡೆದ ರಕ್ತದಾನ ಶಿಬಿರದಲ್ಲಿ 26 ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು, ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳು, ಹಾಸನಾಂಬ ಲಯನ್ಸ್ ಕ್ಲಬ್ ಪದಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪದಾಧಿಕಾರಿಗಳು, ನ್ಯಾಯಾಲಯದ ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.

# ಮಹಿಳೆಯರು ಜಾಗೃತರಾದಲ್ಲಿ ಸ್ವಾವಲಂಬನೆ ಜೀವನ ಸಾಧ್ಯ

• ಪ್ರಜೋದಯ ವರದಿ

**ಹಾಸನ:** ಮಹಿಳೆಯರು ಜಾಗೃತರಾದಲ್ಲಿ ಮಾತ್ರ ಸ್ವಾವಲಂಬನೆ ಜೀವನ ನಡೆಸಬಹುದು. ಸ್ವಯಂ ಉದ್ಯೋಗ, ಕೆಲಸ ಮಾಡುವುದರಿಂದ ಜೀವನ ಸುಧಾರಿಸುತ್ತದೆಂದು ಕವಯಿತ್ರಿ ಅನುರಾಧ ಅವರು ಹೇಳಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಇನ್ನೂ ಸ್ವಾತಂತ್ರ್ಯವಿಲ್ಲ, ಕುಟುಂಬದ ನಿರ್ವಹಣೆ, ಮಕ್ಕಳು, ಗಂಡ, ಮನೆಯಲ್ಲಿ ಹಿರಿಯರನ್ನು ನೋಡಿಕೊಳ್ಳುವುದರ ಜೊತೆಗೆ ವೃತ್ತಿ ಜೀವನ, ಕೆಲಸ ಕಾರ್ಯಗಳು, ಇವೆಲ್ಲವೂ ಮಹಿಳೆಯರ ಜವಾಬ್ದಾರಿಯಾಗಿವೆ. ಇಷ್ಟೆಲ್ಲಾ ದುಡಿದರೂ ನೆಮ್ಮದಿಯಾಗಿ ಇರುವುದಿಲ್ಲವೆಂದು ಬೇಸರ ಹೊರ ಹಾಕಿದರು.

ಅಡುಗೆಯಿಂದ ಹಿಡಿದು ಜಮೀನಿನ ಕೆಲಸ ಒಳಗೊಂಡಂತೆ, ಪುರುಷನ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾಳೆ. ನಮ್ಮ ದೇಶದ ಕಟ್ಟುಪಾಡುಗಳು ಆ ರೀತಿಯಲ್ಲಿ ಅವಲಂಬಿಸಿವೆ. ವಿದ್ಯಾವಂತೆಯಾಗಿ, ಸ್ವಯಂ ಉದ್ಯೋಗ ಮಾಡುವುದು, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆ ಮುಂದು ವರಿದರೆ, ಪುರುಷರ ಸಮಾನತೆಯ ಹಕ್ಕು ಬಾಧ್ಯತೆಗಳು ಸಿಗುತ್ತವೆ ಎಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ಮಾತನಾಡಿ, ಮಹಿಳೆಯರಿಗೆ ಸಮಾನತೆಯ ಹಕ್ಕು ಸಿಗಬೇಕು, ಆಗ ಮಾತ್ರ ಮಹಿಳಾ ದಿನಾಚರಣೆಗೆ ಗೌರವ ಸಿಕ್ಕಿದಂತಾಗುತ್ತದೆ. ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಮಹಿಳೆ ಯರಿಗೆ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗ ಬೇಕು. ಹಿಂದೆ ಇದ್ದಂತ ಪರಿಸ್ಥಿತಿ ಈಗ ಇಲ್ಲಾ, ಸ್ವಲ್ಪ ಬದಲಾವಣೆ ಯಾಗಿದ್ದು, ವಿದ್ಯಾವಂತರಿದ್ದಾರೆ, ಅನೇಕರು ಅಧಿಕಾರಿಗಳಾಗಿ ಉದ್ಯೋಗ ಮಾಡುತ್ತಿದ್ದಾರೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ನೂರಾರು ವರ್ಷಗಳಿಂದ ಪುರುಷ ಪ್ರಧಾನ ಸಮಾಜವಾಗಿದೆ. ಮಹಿಳೆಯ ರಿಗೂ ಸಹ ಸಮಾನತೆಯ ಹಕ್ಕು ಸಿಗಬೇಕು. ಮಹಿಳೆಯರಿಗೆ ಭದ್ರತೆ ಸಿಗಬೇಕು. ಈಗ ಪ್ರತಿ ಯೊಂದು ಕ್ಷೇತ್ರದಲ್ಲಿ ಸಮಾನವಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಸಂತೋಷ ಎಂದರು.




ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಜೆ. ಅಮರೇಂದ್ರ, ಮಾತನಾಡಿದರು. ಕಾರ್ಯ ಕ್ರಮದ ಸಂಯೋಜಕ ಪ್ರೊ.ಅಮೃತ, ಪ್ರೊ.ಯೋಗಿತಾ, ನಿವೃತ್ತ ಪ್ರಾಂಶುಪಾಲ ಡಾ.ಎ. ಜೆ.ಕೃಷ್ಣಯ್ಯ, ಎನ್ ಎಸ್‌ಎಸ್ ಅಧಿಕಾರಿ ಡಾ.ವಿಜಯಕುಮಾರ್, ಪ್ರೊ.ಬಿ.ಉಮಾ, ಡಾ.ಗೀತಾ ಕಿರಣ್ ಇತರರಿದ್ದರು.

ಕಾಲೇಜಿನ ರಿಜಿಸ್ಟ್ರಾರ್ ಕುಮುದಾ ಇದ್ದರು.

# ವಿದ್ಯುತ್ ವ್ಯತ್ಯಯ ಖಂಡಿಸಿ ಅರೆಬೆತ್ತಲೆ ಪ್ರತಿಭಟನೆ

## ಸೆಸ್ ಕಚೇರಿ ಎದುರು ರೈತರ ಆಕ್ರೋಶ। 7 ಗಂಟೆ ವಿದ್ಯುತ್ ನೀಡಲು ಆಗ್ರಹ

• ಪ್ರಜೋದಯ ವರದಿ

**ಜಾವಗಲ್:** ರೈತರಿಗೆ ದಿನಕ್ಕೆ ಏಳು ಗಂಟೆ ವಿದ್ಯುತ್ ಸರಬರಾಜು ಮಾಡದೇ ತೊಂದರೆ ಉಂಟು ಮಾಡುತ್ತಿರುವುದನ್ನು ಖಂಡಿಸಿ ರೈತರು ಜಾವಗಲ್ ಸೆಸ್ಕ್ ಶಾಖಾಧಿಕಾರಿ ಕಚೇರಿ ಎದುರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಜಾವಗಲ್ ಎಂಯುಎಸ್‌ಎಸ್ ಉಪಕೇಂದ್ರದಿಂದ ಸಂಕೀಹಳ್ಳಿ ಫೀಡರ್ ಮೂಲಕ ಮಲದೇವಿಹಳ್ಳಿ, ತಾವರೆಹಳ್ಳಿ, ಸಂಕೀಹಳ್ಳಿ ಸೇರಿ ಹಲವಾರು ಗ್ರಾಮಗಳಿಗೆ ಐಪಿ ಸೆಟ್, ಗಂಗಾ ಕಲ್ಯಾಣ, ಅಕ್ರಮ-ಸಕ್ರಮ ಹಾಗು ಸ್ವಂತ ಕಾಮಗಾರಿಗಳಿಗಾಗಿ ದಿನಕ್ಕೆ ಏಳು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ಕಳೆದ ಒಂದು ವಾರದಿಂದ ಮಲದೇವಿಹಳ್ಳಿ ಭಾಗದ ರೈತರಿಗೆ ಮಾತ್ರ ವಿದ್ಯುತ್ ನೀಡದೇ ತೊಂದರೆ ನೀಡಲಾಗುತ್ತಿದೆಂದು ಆರೋಪಿಸಿದರು.

ರಾತ್ರಿ ವೇಳೆಯಲ್ಲಿ ವಿದ್ಯುತ್ ನೀಡುವ ಬದಲು ಹಗಲಿನಲ್ಲೇ ನಿರಂತರವಾಗಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ನೀಡಬೇಕೆಂದು ಒತ್ತಾಯಿಸಿದರು. ಸ್ಥಳಕ್ಕೆ ಹಿರಿಯ ಅಧಿಕಾರಿಗಳನ್ನು ಕರೆಸಿ ಸಮಸ್ಯೆ ಬಗೆಹರಿ ಸುವವರೆಗೆ ಧರಣಿ ಮುಂದುವರಿಸುವುದಾಗಿ ರೈತರು ಎಚ್ಚರಿಕೆ ನೀಡಿ ದರು. ವಾರಕ್ಕೆ ಒಂದು ದಿನ ಲೋಡ್ ಶೆಡ್ಡಿಂಗ್ ಮಾಡಿದರೂ ಪರವಾಗಿಲ್ಲ, ಉಳಿದ ಆರು ದಿನ ಪ್ರತಿದಿನ 7 ಗಂಟೆಗಳ ಕಾಲ ನಿರಂತರ ವಿದ್ಯುತ್ ಸರಬರಾಜು ಮಾಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆ ವೇಳೆ ಶಾಖಾಧಿಕಾರಿ ರಮೇಶ್ ಅವರು ಕಾರ್ಯಪಾಲಕ ಇಂಜಿನೀಯರ್ ಹಾಗು ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಅವರೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ರೈತರ ಸಮಸ್ಯೆಯನ್ನು ವಿವರಿಸಿದರು. ಬಳಿಕ ಸಂಬಂಧಿಸಿದ ಪವರ್ ಮನ್‌ಗಳೊಂದಿಗೆ ಚರ್ಚಿಸಿ ತಾತ್ಕಾಲಿಕವಾಗಿ 3 ದಿನಗಳ ಕಾಲ ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ 4 ಗಂಟೆಗಳ 3 ಫೇಸ್ ವಿದ್ಯುತ್ ನೀಡುವುದಾಗಿ, ಜೊತೆಗೆ 2 ದಿನಕ್ಕೊಮ್ಮೆ ರಾತ್ರಿ 3 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದೆಂದು ಭರವಸೆ ನೀಡಿದರು. ಪ್ರತಿ 3 ದಿನಗಳಿಗೊಮ್ಮೆ ಲೋಡ್ ಶೆಡ್ಡಿಂಗ್ ಮಾಡಲಾಗುವುದೆಂದು ತಿಳಿಸಿದರು. ಅಧಿಕಾರಿಗಳ ಭರವಸೆ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆಯನ್ನು ಸ್ಥಗಿತಗೊಳಿಸಿದರು. ಮುಂದೆ ಈ ರೀತಿಯ ಸಮಸ್ಯೆಗಳು ಮರುಕಳುಹಿಸದಂತೆ ಎಚ್ಚರಿಕೆ ವಹಿಸಬೇಕು, ಇಲ್ಲವಾದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.



ಕೃಷಿಕರಾದ ವಿಶ್ವನಾಥ್, ಜೈಶಂಕರ್, ಶಶಿಧರ್, ನೇರ್ಲಿಗೆ ಮಹೇಶ್, ಜಗನ್ನಾಥ್, ಶ್ರೀನಿವಾಸ್, ವಿಠಲರಾವ್, ಮಂಜಪ್ಪ, ಕೃಷ್ಣಶೆಟ್ಟಿ ಭಾಗವಹಿಸಿದ್ದರು. ಲೈನ್‌ಮ್ಯಾನ್ ಮೋಹನ್ ಉಪಸ್ಥಿತರಿದ್ದರು.

# ಸಕಲೇಶಪುರದಲ್ಲಿ ಅಕ್ರಮ ಮರಳು ಗಣಿಗಾರಿಕೆ ಅಬ್ಬರ

» ಮೊದಲನೇ ಪುಟದಿಂದ

ಸೋಮವಾರ ಮುಂಜಾನೆ ಪಟ್ಟಣದ ಅಜಾದ್ ರಸ್ತೆಯಲ್ಲಿರುವ ಭುವನೇಶ್ವರಿ ವೃತ್ತದ ಸಮೀಪ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಒಂದು ವಾಹನ ಕೆಟ್ಟು ಹೋದ ಹಿನ್ನಲೆ ಅದರಲ್ಲಿದ್ದ ಮರಳನ್ನು ರಸ್ತೆ ಮೇಲೆಯೇ ಸುರಿದು ವಾಹನವನ್ನು ಅಲ್ಲಿಂದ ತೆಗೆದುಕೊಂಡು ಹೋಗಿರುವ ಘಟನೆ ಬೆಳಕಿಗೆ ಬಂದಿದೆ.

ಆಶ್ಚರ್ಯದ ಸಂಗತಿಯೇನೆಂದರೆ, ಮರಳು ಸುರಿದಿರುವ ಸ್ಥಳವು ಉಪವಿಭಾಗಾಧಿಕಾರಿ ಕಚೇರಿ, ತಹಶೀಲ್ದಾರ್ ಕಚೇರಿ ಹಾಗು ಪೊಲೀಸ್ ಠಾಣೆಯಿಂದ ಸುಮಾರು 200 ಮೀಟರ್ ಅಂತರದಲ್ಲಿದ್ದರೂ ಈವರೆಗೆ ಅಧಿಕಾರಿಗಳು ಅಥವಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮರಳನ್ನು ಜಪ್ತಿ ಮಾಡಿಲ್ಲವೆಂಬುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

**ನೆಪಮಾತ್ರಕ್ಕೆ ವಾಹನ ವಶ:** ನೆಪಮಾತ್ರಕ್ಕೆ ಒಂದೆರಡು ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗುತ್ತದೆ. ವಾಸ್ತವದಲ್ಲಿ ಅಧಿಕಾರಿಗಳೊಂದಿಗೆ ಹೊಂದಾಣಿಕೆ ಮಾಡದವರ ವಾಹನಗಳನ್ನು ಮಾತ್ರ ಬೆನ್ನಟ್ಟಿ ಕ್ರಮ ಕೈಗೊಳ್ಳಲಾಗುತ್ತದೆ. ಹೊಂದಾಣಿಕೆ ಮಾಡಿಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿಲ್ಲವೆಂಬ ಗಂಭೀರ ಆರೋಪ ಕೇಳಿ ಬಂದಿದೆ. ಹೇಮಾವತಿ ನದಿ ಪರಿಸರವನ್ನು ರಕ್ಷಿಸುವ ದೃಷ್ಟಿಯಿಂದ ಅಕ್ರಮ ಮರಳುಗಾರಿಕೆಯಲ್ಲಿ ತೊಡಗಿರುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅಕ್ರಮ ಚಟುವಟಿಕೆಗಳಿಗೆ ತಕ್ಷಣ ತೆರೆ ಎಳೆಯಬೇಕೆಂದು ಜನರು ಆಗ್ರಹಿಸಿಸುತ್ತಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಮೌನ ವಹಿಸಿರುವುದು ಸಾರ್ವಜನಿಕರಲ್ಲಿ ಅಸಮಾಧಾನ ಹೆಚ್ಚುವಂತೆ ಮಾಡಿದೆ.

# ಆಸ್ತಿ ವಿವಾದ: ಮಚ್ಚು ಹಿಡಿದು ಹಲ್ಲೆಗೆ ಯತ್ನ



• ಪ್ರಜೋದಯ ವರದಿ

**ಹಾಸನ:** ಆಸ್ತಿ ವಿಚಾರಕ್ಕೆ ಮಾವ ಮಚ್ಚು ಹಿಡಿದು ಸೊಸೆಯ ಮೇಲೆ ಹಲ್ಲೆ ನಡೆಸಲು ಯತ್ನಿಸಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವ ಘಟನೆ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ದೊಡ್ಡ ಚಾಕನಹಳ್ಳಿ ಗ್ರಾಮ ದಲ್ಲಿ ನಡೆದಿದೆ.

ಕೆಲ ದಿನಗಳಿಂದ ಮಾಳಿಗೇಗೌಡ ಅವರ ಕುಟುಂಬದಲ್ಲಿ ಆಸ್ತಿ ಹಂಚಿಕೆ ವಿಚಾರವಾಗಿಭಿನ್ನಾಭಿಪ್ರಾಯ ಮುಂದುವರಿದಿದ್ದವು. ಈ ವಿಚಾರ ವಾಗಿ ಸೋಮವಾರ ಕುಟುಂಬ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದಿದ್ದು, ಇದು ತುಸು ವಿಕೋಪಕ್ಕೆ ಹೋಗಿ ತಾಳ್ಮೆ ಕಳೆದುಕೊಂಡ ಮಾಳಿಗೇಗೌಡ, ಮಚ್ಚು ಹಿಡಿದು ಸೊಸೆಯರ ಮೇಲೆ ದಾಳಿ ಮಾಡಲು ಮುಂದಾಗಿದ್ದಾರೆ.

ಮಾವ ಮಚ್ಚು ಹಿಡಿದು ಮುಂದೆ ಬಂದಾಗ ಭಯಭೀತರಾದ ಮಹಿಳೆಯರು, ಪ್ರಾಣಭಯದಲ್ಲಿ ಕಿರುಚುತ್ತಾ ಎದುರಾಗಿ ನಿಂತು ಸಹಾಯ ಕ್ಕಾಗಿ ಕೂಗಾಡಿದ್ದಾರೆ. ಗಲಾಟೆ ಶಬ್ದ ಕೇಳಿ ಬಂದರೂ ಘಟನೆ ನಡೆದ ಜಾಗ ಜಮೀನು ಬಳಿ ಯಾರು ಇಲ್ಲದಿದ್ದ ರಿಂದ ಯಾರೊಬ್ಬರೂ ನೆರವಿಗೆ ಬರಲಿಲ್ಲ ಎನ್ನಲಾಗಿದೆ. ಅದೃಷ್ಟವಶಾತ್ ಜಗಳ ಮಾತಿನಲ್ಲೇ ಕೊನೆಗೊಂಡಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ.

## ಎಐಡಿವೈಒ ನೇತೃತ್ವದಲ್ಲಿ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆ

# ಸರ್ಕಾರಿ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಹಾಗು ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ, ನೇಮಕಾತಿಯಲ್ಲಿ ನಡೆಯುವ ಭ್ರಷ್ಟಾಚಾರ ತಡೆಗಟ್ಟಬೇಕೆಂದು ಆಗ್ರಹಿಸಿ ಎಐಡಿವೈಒ ನೇತೃತ್ವದಲ್ಲಿ ಉದ್ಯೋಗಾಕಾಂಕ್ಷಿಗಳು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.




ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಅದನ್ನು ತುಂಬಿಕೊಳ್ಳುವ ಪ್ರಕ್ರಿಯ ನಡೆಯುತ್ತಿಲ್ಲ. ಕಳೆದ ಐದಾರು ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ನೇಮಕಾತಿಗಳಾಗದಿರುವುದು ಉದ್ಯೋಗಾಕಾಂಕ್ಷಿಗಳಲ್ಲಿ ಆಕ್ರೋಶ ಮಡುಗಟ್ಟಿದೆ. ವಿದ್ಯಾರ್ಥಿಗಳು ಪದೇ ಪದೇ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆಂದು ದೂರಿದರು.

ನಿರಂತರ ಹೋರಾಟದ ಪ್ರತಿಫಲವಾಗಿ ಮುಖ್ಯಮಂತ್ರಿ ಕಳೆದ ಡಿಸೆಂಬರ್‌ನಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಮತ್ತು ಬೆಳಗಾವಿ ಅಧಿವೇಶನದಲ್ಲಿ 24,300 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತಿದೆ ಎಂದು ಘೋಷಿಸಿದರು. ಆದರೆ, ತಿಂಗಳುಗಳು ಕಳೆದರೂ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿಲ್ಲವೆಂದು ಆರೋಪಿಸಿದರು.

ಈಗ ಮತ್ತೆ ಹೋರಾಟದ ಬಿಸಿ ತಟ್ಟಿದ ಮೇಲೆ ಸಚಿವ ಸಂಪುಟ ಸಭೆಯಲ್ಲಿ 56,000 ಹುದ್ದೆಗಳ ನೇಮಕಾತಿಗೆ ಅನುಮೋದನೆ ದೊರೆತಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಇದು ಕೇವಲ ಬಾಯಿ ಮಾತಾಗದೇ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದು ಒತ್ತಾಯಿಸಿದರು.

ಖಾಲಿ ಇರುವ ಎಲ್ಲಾ 2,84,881 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರ ತಡೆಗಟ್ಟಬೇಕು. ನೇಮಕಾತಿ ಯಲ್ಲಿ ಪಾರದರ್ಶಕತೆ ಕಾಪಾಡಬೇಕು, ನೇಮಕಾತಿಯ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಬೇಕು, ಅರ್ಜಿ ಶುಲ್ಕ ಕಡಿತ ಮಾಡಬೇಕು, ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗಗಳನ್ನು ನಾಶ ಮಾಡುವ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ಕೈ ಬಿಡಬೇಕೆಂದು ಆಗ್ರಹಿಸಿದರು.

ಕಳೆದ ನವೆಂಬರ್ ತಿಂಗಳಿನಿಂದ ಫೆಬ್ರವರಿವರೆಗೆ ಜಿಲ್ಲೆಯ ಯುವಜನರು, ಉದ್ಯೋಗಾಕಾಂಕ್ಷಿಗಳು ಮತ್ತು ಸಾರ್ವಜನಿಕರಿಂದ ಸಂಗ್ರಹಿಸಿದ ನೂರಾರು ಸಹಿ ಸಂಗ್ರಹಿಸಿದ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಯಿತು. ಎಐಡಿವೈಒ ಮುಖಂಡರಾದ ಸುನಿಲ್, ಉದ್ಯೋಗ ಆಕಾಂಕ್ಷಿ ಹೋರಾಟ ಸಮಿತಿ ಅಧ್ಯಕ್ಷ ರಘು, ಉಪಾಧ್ಯಕ್ಷ ರತನ್, ಶರತ್, ಸಂತೋಷ್, ಶಿವಕುಮಾರ್‌ನಾಯ್ಕ್ ಹಾಗೂ ಸಮಿತಿ ಸದಸ್ಯರಾದ ಗೌತಮ್, ಯೋಗೇಶ್, ಅರುಣ್, ಆದರ್ಶ್, ಮನೋಜ್, ಶಿವು, ಹೇಮಂತ್, ಸಾಗರ್, ಪ್ರಸನ್ನ ಕಾರ್ತಿಕ್, ಪ್ರಕಾಶ್ ಮುಂತಾದವರು ಹಾಜರಿದ್ದರು.

# ಮಡಿವಾಳರನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯ

## ಮಾ.16 ರಿಂದ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಮಾ.16ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ನಿರ್ದೇಶಕ ರವಿಕುಮಾರ್ ಅವರು ತಿಳಿಸಿದರು.

ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಬೇಡಿಕೆ ಹಲವು ದಶಕಗಳಿಂದ ಕೇಳಿ ಬರುತ್ತಿದ್ದರೂ ಯಾವುದೇ ಸರ್ಕಾರಗಳು ಪರಿಗಣಿಸಿಲ್ಲ. ನಮ್ಮ ಸಮುದಾಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದರೂ ಸರಿಯಾದ ಮಾನ್ಯತೆ ದೊರೆಯದೇ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಮೈಸೂರು ಮಹಾರಾಜರ ಕಾಲದಿಂದಲೂ ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಕುರಿತು ಚರ್ಚೆ ನಡೆಯುತ್ತಲೇ ಇದೆ. ಅಲ್ಲಿಂದ ಇಲ್ಲಿಯವರೆಗೂ ನಾವು ಹಿಂದುಳಿದವರೇ ಆಗಿದ್ದೇವೆಂದು ಬೇಸರ ವ್ಯಕ್ತಪಡಿಸಿದರು.



2009ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕಾಲದಲ್ಲಿ ಸಮು ದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ಮೈಸೂರು ವಿಶ್ವವಿದ್ಯಾಲಯ ಪ್ರೊ. ಡಾ.ಅನ್ನಪೂರ್ಣ ಅವರಿಂದ 2 ವರ್ಷ ಕಾಲ ರಾಜ್ಯದ ಸುಮಾರು 28 ಜಿಲ್ಲೆಗಳಿಗೆ ಭೇಟಿ ನೀಡಿ ಸಮಗ್ರ ಅಧ್ಯಯನ ನಡೆಸಿ 2011ರಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸಿ, ಮಡಿವಾಳ ಸಮುದಾಯ ವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಶಿಫಾರಸ್ಸು ಮಾಡಲಾಗಿದೆ. ಆ ವರದಿ ಇಂದಿಗೂ ಜಾರಿಯಾಗಿಲ್ಲ. 2022ರಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದ ಕೋಟಾ ಶ್ರೀನಿವಾಸ ಪೂಜಾರಿ ಅವರು ಅದೇ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಲು ಸೂಚಿಸಿದ್ದರೂ ಸಾಧ್ಯವಾಗಲಿಲ್ಲ. ವರದಿ ಜಾರಿಗೆ ಆಗ್ರಹಿಸಿ ರಾಜ್ಯದ ವಿವಿಧ ಸಂಘಟನೆ ಒಡಗೂಡಿ ಎಲ್ಲಾ 224 ಶಾಸಕರನ್ನೂ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. 19 ಮಂತ್ರಿಗಳು, 137 ಶಾಸಕರು ಸೇರಿ ಒಟ್ಟು 156 ಶಿಫಾರಸ್ಸು ಪತ್ರ ನೀಡಿದ್ದು, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಇಷ್ಟಾದರೂ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಅದಕ್ಕಾಗಿ ಸಮುದಾ ಯದ ಹಕ್ಕಿಗಾಗಿ ಅಹೋರಾತ್ರಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟದ ಸಂಘಟನೆಗಳ ಪದಾಧಿಕಾರಿಗಳು, ಮಡಿಕಟ್ಟೆಗಳ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ಸಮುದಾಯದ ಸರ್ಕಾರಿ ನೌಕರರು, ನಿವೃತ್ತ ನೌಕರರು, ವ್ಯಾಪಾರಿಗಳು ಸೇರಿ ಎಲ್ಲರೂ ಭಾಗಿಯಾಗಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಪದಾಧಿಕಾರಿಗಳಾದ ಕುಮಾರ್, ಚಂದ್ರಶೇಖರ್, ಮಲ್ಲೇಶ್, ಜಯಣ್ಣ, ಲೋಹಿತ್, ಸೋಮಣ್ಣ, ರಘು ಇದ್ದರು.

# ರೈಲ್ವೆ ಮಾರ್ಗಕ್ಕೆ ಭೂಸ್ವಾಧೀನ: ಪರಿಹಾರ ಹೆಚ್ಚಿಸಿ

» ಮೊದಲನೇ ಪುಟದಿಂದ

ನೀಡುತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಬಳಿ ಸಮಸ್ಯೆ ಹೇಳಿಕೊಂಡರೆ, ಇದು ಮುಗಿದು ಹೋದ ಕಥೆ ಎಂದು ನಿರ್ಲಕ್ಷ್ಯದಿಂದ ಮಾತನಾಡುತ್ತಾರೆಂದು ಬೇಸರ ವ್ಯಕ್ತಪಡಿಸಿದರು.

ಹಲವು ವರ್ಷಗಳಿಂದ ಇದೇ ಜಮೀನು ನಂಬಿ ಬದುಕುತ್ತಿರುವ ನಮಗೆ ಬೇರೆ ಜಮೀನು ಇಲ್ಲ. ರೈಲ್ವೆ ಇಲಾಖೆ ಕಾಮಗಾರಿಗೆ ಜಮೀನು ಬಿಟ್ಟು ಕೊಟ್ಟ ನಂತರ ಕುಟುಂಬದ ಜೀವನೋಪಾಯದ ಮೇಲೂ ಪರಿಣಾಮ ಬಿರಲಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿ ಪರಿಶೀಲಿಸಿ, ರೈತರಿಗೆ ನ್ಯಾಯಸಮ್ಮತವಾಗಿ ಹೆಚ್ಚುವರಿ ಪರಿಹಾರ ನೀಡುವಂತೆ ರೈಲ್ವೆ ಇಲಾಖೆಗೆ ಆದೇಶಿಸಬೇಕೆಂದು ಮನವಿ ಮಾಡಿದರು.

ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದ ಬೆಳೆಗಳ ಮೌಲ್ಯ, ಮರಗಳ ಸಂಖ್ಯೆ ಹಾಗು ಜಮೀನಿನ ನಿಜವಾದ ಮೌಲ್ಯ ಪರಿಗಣಿಸಿ ಸಮರ್ಪಕ ಪರಿಹಾರ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟದ ದಾರಿ ಹಿಡಿಯಬೇಕಾದ ಪರಿಸ್ಥಿತಿ ಎದುರಾಗಬಹುದೆಂದು ಎಚ್ಚರಿಕೆ ನೀಡಿದರು. ಗ್ರಾಮಸ್ಥರಾದ ಮಂಜೇಗೌಡ, ಚಿದಾನಂದ್, ಯೋಗೀಶ್ ಇದ್ದರು.

# ವೀರಭದ್ರೇಶ್ವರ ಸ್ವಾಮಿ ಕೆಂಡೋತ್ಸವ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಜೆ.ಪಿ.ನಗರದಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ, ಭದ್ರಕಾಳಿ ಹಾಗೂ ಚೌಡೇಶ್ವರಿ ಅಮ್ಮನವರ 32ನೇ ವರ್ಷದ ಕೆಂಡೋತ್ಸವ ಸಂಭ್ರಮದಿಂದ ನೆರವೇರಿತು.

ಕೊಂಡೋತ್ಸವದ ಅಂಗವಾಗಿ ಬೆಳಗ್ಗಿನ ಜಾವವೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಗಂಗಾ ಪೂಜೆ, ಆಲಯ ಪ್ರವೇಶ, ಲಕ್ಷ್ಮೀ ಪೂಜೆ, ಗಣಪತಿ ಹೋಮ ಸೇರಿ ಹಲವು ಪೂಜಾ ವಿಧಿಗಳು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ಶಿವಸ್ತುತಿ ಪಠಣದೊಂದಿಗೆ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕಗಳನ್ನು ನೆರವೇರಿಸಿ ದೇವರ ಕೃಪೆಗೆ ಭಕ್ತರು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ನವಗ್ರಹ ಹೋಮ, ಮೃತ್ಯುಂಜಯ ಹೋಮ, ರುದ್ರ ಹೋಮ ಸೇರಿ ವಿವಿಧ ಹೋಮಹವನಗಳನ್ನು ಅರ್ಚಕರು ನೆರವೇರಿಸಿದರು. ಪೂಜಾ ಕಾರ್ಯಕ್ರಮಗಳಲ್ಲಿ ಅನೇಕ ಭಕ್ತರು ಭಾಗವಹಿಸಿ ದೇವರ ಆಶೀರ್ವಾದ ಪಡೆದರು.



ನೆಹರು ನಗರದ ಅಯ್ಯಪ್ಪ ಸ್ವಾಮಿ ದೇವಾಲಯ ಅವರಣದಿಂದ ಶ್ರೀ ವೀರಭದ್ರೇಶ್ವರ ಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿಗಳ ಉತ್ಸವ ಮೂರ್ತಿಗಳನ್ನು ಭಕ್ತರ ವೀರಗಾಸೆಯೊಂದಿಗೆ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರಲಾಯಿತು. ಮೆರವಣಿಗೆಯಲ್ಲಿ ಭಕ್ತರು ಜಯಘೋಷಗಳೊಂದಿಗೆ ಭಾಗವಹಿಸಿ ಭಕ್ತಿಭಾವ ವ್ಯಕ್ತಪಡಿಸಿದರು.

ದೇವಾಲಯದ ಮುಂಭಾಗದಲ್ಲಿ ಸಿದ್ಧಪಡಿಸಲಾಗಿದ್ದ ಕೊಂಡಕ್ಕೆ ಪೂಜೆ ಸಲ್ಲಿಸಿದ ಪ್ರಧಾನ ಅರ್ಚಕ ದಿನೇಶ್ ಅವರು ಕೆಂಡೋತ್ಸವಕ್ಕೆ ಚಾಲನೆ ನೀಡಿದರು.

ಅನೇಕ ಭಕ್ತರು ಕೊಂಡದ ಸುತ್ತ ಪ್ರದಕ್ಷಿಣೆ ಹಾಕಿ ತಮ್ಮ ಭಕ್ತಿ ಸಮರ್ಪಿಸಿದರು. ದೇವರ ಕೃಪೆ ಲಭಿಸಲಿ ಎಂಬ ನಂಬಿಕೆಯಿಂದ ಭಕ್ತರು ಕೆಂಡೋತ್ಸವದಲ್ಲಿ ಭಾಗವಹಿಸಿ ಪೂಜೆ ಸಲ್ಲಿಸಿದರು.

ಸಂಸ್ಥಾನ ಹಿರೇಮಠ ಕಾರ್ಜುವಳ್ಳಿಯ ಶ್ರೀ ಷ::ಬ್ರ:: ಸದಾಶಿವ ಶಿವಾಚಾರ್ಯ ಮಹಾಸ್ವಾಮೀಜಿ ಭಕ್ತರಿಗೆ ಆಶೀರ್ವಚನ ನೀಡಿದರು. ಧಾರ್ಮಿಕ ಸಮಾರಂಭವನ್ನು ರತ್ನಮ್ಮ ಹಾಗೂ ಕುಟುಂಬ ಭಕ್ತರ ಸಹಕಾರದಿಂದ 32 ವರ್ಷಗಳಿಂದಲೂ ಸಹ ಭಕ್ತಿ ಭಾವದಿಂದ ನಡೆಸಿಕೊಂಡು ಬರುತ್ತಿದ್ದಾರೆಂದು ಹೇಳಿದರು.

# ವಿದ್ಯಾರ್ಥಿಗಳಿಗೆ ಷೇರು ಮಾರುಕಟ್ಟೆ ಅರಿವು ಅವಶ್ಯ

• ಪ್ರಜೋದಯ ವರದಿ

**ಹಾಸನ:** ವಾಣಿಜ್ಯಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುವುದರ ಕುರಿತು ಮತ್ತು ಅದರ ಲಾಭ, ನಷ್ಟದ ಬಗ್ಗೆ ಸಂಪೂರ್ಣವಾಗಿ ಅರಿವು ಮೂಡಿಸಿಕೊಂಡರೆ ಆರ್ಥಿಕವಾಗಿ ಸ'ಬ ಲ ರಾ ಗ'ಬ ಹ'ು ದೆ'ಂ ದ'ು ಹೊಳೆನರಸೀಪುರ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಸ್.ಸುನಿಲ್ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ಮಂಗಳವಾರ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಯುವಜನತೆಗೆ ಅನೇಕ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮಾಡಿ ಆದಾಯಗಳಿಸುವ ಜೊತೆಗೆ ಉದ್ಯೋಗ ಸೃಷ್ಟಿ ಮಾಡುವ ಅವಕಾಶಗಳು ಇರುತ್ತದೆ. ಅದಕ್ಕೆ ಬೇಕಾದ ಕೌಶಲ್ಯ ಜಾಣ್ಮೆಯ ಅಗತ್ಯತೆ ಇದೆ. ರಾಷ್ಟ್ರ ಮತ್ತು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಬಂಡವಾಳ ಹೂಡಿಕೆ ಮಾಡಿ ಮಾರುಕಟ್ಟೆಯಲ್ಲಿ ಲಾಭ ಗಳಿಸುವ ಜೊತೆಗೆ ಸರ್ಕಾರದ ಮಟ್ಟದಲ್ಲಿ ಸರಿಯಾದ ತೆರಿಗೆ ಕಟ್ಟುವ ಮೂಲಕ ರಾಷ್ಟ್ರೀಯ ಸಂಪತ್ತು ಹೆಚ್ಚಿಸಲು ಸಹಕಾರಿಯಾಗಬೇಕೆಂದರು.



ಇಂದು ಎಲ್ಲಾ ಕ್ಷೇತ್ರಗಳಲ್ಲೂ ಪೈಪೋಟಿ ಇದ್ದು, ಸ್ವ ಉದ್ಯೋಗ, ಹಣಗಳಿಕೆಗೆ ಸಾಕಷ್ಟು ಒಳ್ಳೆಯ ಮಾರ್ಗಗಳು ಇವೆ. ಕೆಲ ವರ್ಷಗಳ ಹಿಂದಿನಿಂದ ಬಂಡವಾಳ ಹೂಡಿಕೆ ಮಾಡುವ ಯುವಕರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದರ ಬಗ್ಗೆ ಅಧ್ಯಯನ ಮಾಡಿದರೆ ಹಣಗಳಿಕೆ ಸುಲಭ ವಾಗಲಿದೆ. ವಿಶೇಷವಾಗಿ ವಾಣಿಜ್ಯಶಾಸ್ತ್ರ ಅಧ್ಯಯನ ಮಾಡುವ ಯುವಕರು ದೇಶ ವಿದೇಶ ಗಳಲ್ಲಿ ನಡೆಯುತ್ತಿರುವ ಷೇರು ಮಾರುಕಟ್ಟೆಗಳ ಬಗ್ಗೆ ತಿಳಿದುಕೊಳ್ಳಬೇಕು. ಪಠ್ಯದ ವಿಷಯನ್ನು ಎಷ್ಟು ಆಸಕ್ತಿಯಿಂದ ಕಲಿಯುತ್ತೇವೊ ಹಾಗೆಯೆ ನಮ್ಮ ಸುತ್ತಲಿನ ಆರ್ಥಿಕ ವ್ಯವಹಾರ, ವೈಹಿವಟುಗಳ ಬಗ್ಗೆ ತಿಳಿದುಕೊಂಡರೆ ಆರ್ಥಿಕವಾಗಿ ಸಬಲರಾಗಲು ಸಹಾಯಕವಾಗುತ್ತದೆ ಎಂದರು.

ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಾಣಿಜ್ಯಶಾಸ್ತ್ರ ವಿಷಯದಲ್ಲಿ ಅಧ್ಯಯನ ಮಾಡುತ್ತಿರುವ ಯುವಕರಿಗೆ ಇಂದು ಸಮಾಜದಲ್ಲಿ ಅಪಾರವಾದ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ. ಅಧ್ಯಾಪಕರು ಬೋಧಿಸುವ ಪಠ್ಯ ದೊಂದಿಗೆ ಅವರು ನೀಡುವ ಸಾಮಾನ್ಯ ಜ್ಞಾನದ ಬಗ್ಗೆ ಮಾಹಿತಿ ಪಡೆದು ಉದ್ಯೋಗ ಗಿಟ್ಟಿಸಿ ಕೊಳ್ಳಲು ಬೇಕಾದ ಕೌಶಲ್ಯಗಳನ್ನು ಕಲಿತರೆ ಜೀವನದಲ್ಲಿ ಸಾಧನೆ ಮಾಡಲು ಸಹಕಾರಿಯಾಗಲಿದೆ. ಆಧುನಿಕ ತಂತ್ರಜ್ಞಾನದ ಬಗ್ಗೆ ಹಾಗೂ ಅದರ ಬಳಕೆ ಮಾಡುವುದನ್ನು ಕಲಿಯುವ ಮೂಲಕ ಉದ್ಯೋಗವನ್ನು ಗಟ್ಟಿಸಿಕೊಳ್ಳಬಹುದಾದ ಕೌಶಲ್ಯಗಳ ಕಡೆ ಯುವಕರು ಕ್ರಮ ವಹಿಸಬೇಕಿದೆ ಎಂದು ಹೇಳಿದರು.

ಐ.ಕ್ಯು.ಎ.ಸಿ. ಸಂಚಾಲಕಜಿ.ಆರ್. ಮೋಹನ್ ಕುಮಾರ್, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪಿ.ನಂದನ್, ಸಹಾಯಕ ಪ್ರಾಧ್ಯಾಪಕಿ ಡಿ.ಜೆ.ರಮ್ಯ ಹಾಗೂ ವಿಭಾಗದ ಉಪನ್ಯಾಸಕರು ಹಾಜರಿದ್ದರು.

# ಚಿಕ್ಕಬೊಮ್ಮನಹಳ್ಳಿ ರಂಗನಾಥಸ್ವಾಮಿ ಜಾತ್ರೆ

» ಮೊದಲನೇ ಪುಟದಿಂದ

ಕಾರ್ಯಕ್ರಮ ಕೂಡ ಆಯೋಜನೆ ಮಾಡಲಾಗಿದೆ. ಈ ಮೂರು ದಿನ ನಡೆಯುವ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಚಿಕ್ಕಬೊಮ್ಮನಹಳ್ಳಿ ಸೇರಿ ಸುತ್ತಮುತ್ತಲಿನ ಅರಕಲಗೂಡು, ಕೊಣನೂರು, ರಾಮನಾಥಪುರ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿ ಯಶಸ್ವಿ ಗೊಳಿಸಬೇಕು. ರಥೋತ್ಸವದಂದು ಬರುವ ಎಲ್ಲಾ ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾಳೇನಹಳ್ಳಿ ಅಣ್ಣೇಗೌಡರು, ಬೊಮ್ಮನಹಳ್ಳಿ ಕೋಡಿಗೌಡರು, ಹೊನ್ನಗೋಡನಹಳ್ಳಿ ಶ್ರೀನಿವಾಸ್, ಪ್ರಾಂಶುಪಾಲರು ಹೊಡೆನೂರು ಮಹೇಶ್, ಮುಂತಾದವರು ಇದ್ದರು.

# ತಾಯಿಯ ಕೊಲೆ: ಮಗನಿಗೆ 6 ವರ್ಷ ಸಜೆ

**ಹಾಸನ:** ತಾಯಿಯನ್ನೇಕೊಲೆ ಮಾಡಿದ್ದ ಮಗನಿಗೆ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 6 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ ಮತ್ತು 10 ಸಾವಿರ ದಂಡ ವಿಧಿಸಿದೆ. ನಂಜೇಶಗೌಡ ಅಲಿಯಾಸ್ ಪಾಲಕ್ಷ ಶಿಕ್ಷೆಗೆ ಗುರಿ ಯಾದ ಅಪರಾಧಿ. ಸಣ್ಣಮ್ಮ ಮೃತ ತಾಯಿ.

ನಗರ ಹೊರವಲಯದ ಸಂಕಲಾಪುರದಲ್ಲಿ ವಾಸವಾಗಿದ್ದ ನಂಜೇಶಗೌಡ ಮದ್ಯಪಾನ ಮಾಡಲು ಹಣಕ್ಕಾಗಿ ಪತ್ನಿ ಹಾಗು ತಾಯಿಯೊಂದಿಗೆ ಜಗಳ ಮಾಡುತ್ತಿದ್ದ. ಈ ನಡುವೆ ಮನೆಯನ್ನು ಭೋಗ್ಯಕ್ಕೆ ಹಾಕಿಸಿಕೊಳ್ಳಲು ಪತ್ನಿಯ ಒಡವೆಯನ್ನು ಗಿರವಿ ಇಟ್ಟು, ಒಡವೆ ಚೀಟಿಯನ್ನು ನಂಜೇಶಗೌಡ ಅವರೇ ಇಟ್ಟುಕೊಂಡಿದ್ದರು. ಕೆಲ ದಿನಗಳ ಬಳಿಕ ಒಡವೆಯನ್ನು ಬಿಡಿಸುತ್ತೇವೆ ಚೀಟಿಯನ್ನು ಕೊಡಿ ಎಂದು ಪತ್ನಿ ಹಾಗು ಆತನ ತಾಯಿ ಸಣ್ಣಮ್ಮ ಕೇಳಿದ ಸಂದರ್ಭದಲ್ಲಿ ತನ್ನ ತಾಯಿಯೊಂದಿಗೆ ಜಗಳ ತೆಗೆದು 2022 ಫೆ.13 ರಂದು ಮರದ ತುಂಡಿನಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದ. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ತನಿಖೆ ನಡೆಸಿ, ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ಕಲಂ 302 ಐಪಿಸಿ ಅಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನಗರದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಎ. ಹಿದಾಯತ್ ಉಲ್ಲಾ ಪರೀಫ್ ಅವರು, ಪ್ರಕರಣದ ಸಾಕ್ಷಿದಾರರು ಪೂರಕವಾಗಿ ಸಾಕ್ಷ್ಯಾ ನುಡಿದಿರುವ ಕಾರಣ ಆರೋಪಿ ನಂಜೇಶಗೌಡ (ಪಾಲಕ್ಷ) ಅವರ ಮೇಲಿರುವ ದೋಷಾರೋಪಣೆ ಸಾಬೀತಾಗಿದೆ ಎಂದು ತೀರ್ಮಾನಿಸಿದರು.

ಐಪಿಸಿ ಕಲಂ 304-11 ರಡಿ ಎಸಗಿದ ಅಪರಾಧಕ್ಕಾಗಿ 6 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ, ಮತ್ತು 10 ಸಾವಿರ ರೂ. ದಂಡ, ದಂಡ ಪಾವತಿಸಬೇಕು. ತಪ್ಪಿದ್ದಲ್ಲಿ ಒಂದು ವರ್ಷ ಕಾರಾಗೃಹವಾಸ ಶಿಕ್ಷೆ ವಿಧಿಸಿ ಇತ್ತೀಚೆಗೆ ತೀರ್ಪು ನೀಡಿದ್ದಾರೆ.

## ಅರಕಲಗೂಡಿನಲ್ಲಿ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆ

# ಮಹಿಳೆಯರನ್ನು ಪ್ರೋತ್ಸಾಹಿಸಿದರೆ ದೇಶದ ಅಭಿವೃದ್ಧಿ

• ಪ್ರಜೋದಯ ವರದಿ

**ಅರಕಲಗೂಡು:** ಸಮಾಜದಲ್ಲಿ ಮಹಿಳೆಯರನ್ನು ಸಮಾನವಾಗಿ ಕಾಣುವ ಮೂಲಕ ಅವರ ಹಕ್ಕುಗಳನ್ನು ಗೌರವಿಸಿ, ಪ್ರೋತ್ಸಾಹಿಸಿದರೆ ಮಾತ್ರ ದೇಶದ ಸಮಗ್ರತೆ ಮತ್ತು ಅಭಿವೃದ್ಧಿ ಕಾಣಲು ಸಾಧ್ಯವೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಕೆ.ನಾಗೇಶ ಮೂರ್ತಿ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಹಿರಿಯ ಮಹಿಳಾ ಸಾಧಕಿಯರಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಒಂದು ಕುಟುಂಬದ ಬೆನ್ನೆಲುಬು. ಮಹಿಳೆಯಿಲ್ಲದ ಕುಟುಂಬವನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಸಮಾಜದ ಶಕ್ತಿಯಾಗಿ ಮಹಿಳೆ ಕೆಲಸ ಮಾಡುತ್ತಾಳೆ. ಪುರುಷ ಮತ್ತು ಮಹಿಳೆ ಸಮಾನವಾಗಿ ಬಾಳಿದಾಗ ಮಾತ್ರ ಸಮಾಜದ ಪ್ರಗತಿ ಸಾಧ್ಯ ಎಂದು ಹೇಳಿದರು.




1909ರಲ್ಲಿ ಮೊದಲ ಬಾರಿಗೆ ಸೋಷಿಯಲಿಸ್ಟ್ ಪಕ್ಷವು ಮಹಿಳೆಯರಿಗೆ ಗೌರವ ಮತ್ತು ಪ್ರೋತ್ಸಾಹ ನೀಡುವ ಉದ್ದೇಶದಿಂದ ಮಹಿಳಾ ದಿನದ ಬಗ್ಗೆ ಚಿಂತನೆ ನಡೆಸಿತು. 1917ರಲ್ಲಿ ರಷ್ಯಾದಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳಾ ದಿನಾಚರಣೆ ಆಚರಿಸಲಾಯಿತು. 1975ರಲ್ಲಿ ವಿಶ್ವಸಂಸ್ಥೆಯು ಮಾರ್ಚ್ 8 ಅನ್ನು ಅಧಿಕೃತವಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಾಗಿ ಘೋಷಿಸಿದ ಬಳಿಕ ಪ್ರಪಂಚದಾದ್ಯಂತ ಈ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ಚಂಪಾಶ್ರೀ ಅವರು ಮಾತನಾಡಿ, ಮಹಿಳೆಯರು ಉನ್ನತ ಸ್ಥಾನಕ್ಕೇರಿದಾಗ ಸಮಾಜ ಅವರನ್ನು ಮುಕ್ತವಾಗಿ ಒಪ್ಪಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ನೇರವಾಗಿ ಅಥವಾ ಪರೋಕ್ಷವಾಗಿ ಇಂದಿಗೂ ಮಹಿಳೆಯ ರನ್ನು ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಳ್ಳುವಲ್ಲಿ ಸಮಾಜ ಹಿಂಜರಿಯುತ್ತಿರುವುದು ವಿಷಾದಕರ ಸಂಗತಿ. ನಾವು ಇಂದು ನೆಮ್ಮದಿಯಿಂದ ಬದುಕಲು ನಮ್ಮ ಮನೆಯಲ್ಲಿರುವ ತಾಯಿ, ಪತ್ನಿ ಅಥವಾ ಸಹೋದರಿ ಯರ ತ್ಯಾಗ ಮತ್ತು ಬೆಂಬಲವೇ ಪ್ರಮುಖ ಕಾರಣ. ಕುಟುಂಬದ ಪ್ರತಿಯೊಂದು ಕಾರ್ಯದಲ್ಲೂ ಮಹಿಳೆಯರ ಪಾತ್ರ ಅನನ್ಯವಾಗಿದೆ. ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ ನಮ್ಮ ಮೂಲ ಅಸ್ತಿತ್ವವಾದ ಮಗಳು, ತಾಯಿ ಅಥವಾ ಪತ್ನಿಯಾಗಿ ಇರುವ ಸಂಸ್ಕಾರ ಮತ್ತು ಕರ್ತವ್ಯಗಳನ್ನು ಮರೆಯ ಬಾರದೆಂದರು.

ಅಧಿಕ ಸಿವಿಲ್ ನ್ಯಾಯಾಧೀಶರಾದ ಟಿ. ಸುಮಾ ಅವರು ಮಾತನಾಡಿ, ಒಂದು ಹೆಣ್ಣನ್ನು ಬೆಂಬಲಿಸಿ, ಗೌರವಿಸಿ ಮತ್ತು ಹಕ್ಕುಗಳಿಗೆ ಪ್ರೋತ್ಸಾಹ ನೀಡಿದರೆ ಆಕೆ ತನ್ನ ಜೀವನವನ್ನಷ್ಟೇ ಅಲ್ಲ, ತನ್ನ ಕುಟುಂಬವನ್ನು ಮತ್ತು ಸಮಾಜದ ಇತರೆ ಹೆಣ್ಣುಮಕ್ಕಳ ಜೀವನವನ್ನೂ ಬೆಳಗಬಲ್ಲಳು. ಮಹಿಳಾ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಾಗದೆ, ಮಹಿಳೆಯರ ಹಕ್ಕುಗಳು, ಅವರ ಮೇಲಿರುವ ಸವಾಲುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಪ್ರತಿದಿನವೂ ಅರಿವು ಮೂಡಿಸ ಬೇಕೆಂದು ತಿಳಿಸಿದರು.

ಹಿರಿಯರಾದ ಯಶೋಧಮ್ಮ ಮತ್ತು ಸಂಧ್ಯಾ ಶಶಿಕುಮಾರ್ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ಹಕ್ಕುಗಳ ಕುರಿತು ವಕೀಲೆ ಸ್ವಾತಿ ಜೆ.ವಿ. ಗುಪ್ತ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ಎಂ.ಆರ್.ಗಿರೀಶ್, ಕಾರ್ಯ ದರ್ಶಿ ಆರ್.ರಂಗನಾಥ್, ಜಂಟಿ ಕಾರ್ಯದರ್ಶಿ ಚಿತ್ರ ಲಾವಣ್ಯ.ಎಂ, ಖಜಾಂಚಿ ಬಿ.ಆರ್.ಕಿರಣ್ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಟೇಶ್, ವಾಸವಿ ಕ್ಲಬ್ ಕಾರ್ಯದರ್ಶಿ ಎನ್. ಭರತ್, ಖಜಾಂಚಿ ಎಸ್.ಸತೀಶ ಇತರರಿದ್ದರು.

# ನಿಯಂತ್ರಣ ತಪ್ಪಿ ಹಳ್ಳಕ್ಕೆ ಬಿದ್ದ ವಾಹನ



**ಹಾಸನ:** ಚಾಲಕನ ನಿಯಂತ್ರಣ ತಪ್ಪಿದ ಬೊಲೆರೋ ರಸ್ತೆ ಸಮೀಪದ ಹಳ್ಳಕ್ಕೆ ಬಿದ್ದು, ವಾಹನದಲ್ಲಿದ್ದ ನಾಲ್ವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಗರದ ಗೆಂಡೆಕಟ್ಟೆ ಅರಣ್ಯ ಪ್ರದೇಶದ ಸಮೀಪ ಸೋಮವಾರ ಮಧ್ಯರಾತ್ರಿ ನಡೆದಿದೆ.

ರಾತ್ರಿ ವಾಹನ ಚಲಾಯಿಸುತ್ತಿದ್ದ ವೇಳೆ ಅಚಾನಕ್ ಬಂದ ತಿರುವಿನಲ್ಲಿ ರಸ್ತೆ ಸರಿಯಾಗಿ ಕಾಣದೆ, ವೇಗದಲ್ಲಿದ್ದ ವಾಹನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ. ಕಾರು ಬಿದ್ದ ತಕ್ಷಣದಲ್ಲಿ ಏರ್ ಬ್ಯಾಗ್‌ಗಳು ತೆರೆದ ಪರಿಣಾಮ ನಾಲ್ವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಾಹನ ನೇರವಾಗಿ ರೈಲ್ವೆ ಹಳಿಯ ಮೇಲೆ ಬಿದ್ದಿದ್ದರೆ ನಾಲ್ವರೂ ಸ್ಥಳದಲ್ಲೇ ಸಾವನ್ನಪ್ಪುವ ಸಾಧ್ಯತೆ ಇತ್ತು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ ಅರಣ್ಯ ಪ್ರದೇಶದಿಂದ ನಗರಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ತಡೆಗೋಡೆ ಸೇರಿ ಅಗತ್ಯ ಸುರಕ್ಷತಾ ವ್ಯವಸ್ಥೆಗಳು ಇಲ್ಲದಿರುವುದೇ ಅಪಘಾತಗಳಿಗೆ ಕಾರಣವಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019